MANUAL ON KANNADA BRAILLE CONTRACTIONS AND ABBREVIATIONS

ಕನ್ನಡ ಬ್ರೈಲ್ ಸಂಕುಚಿತಗಳ ಮತ್ತು ಸಂಕ್ಷಿಪ್ತ ಪದಗಳ ಕೈಪಿಡಿ



MITRA JYOTHI

CANARA BANK RELIEF & WELFARE SOCIETY
ESTD.1961

SECURITY EQUALITY NFB OPPORTUNITY

राष्ट्रीय दृष्टि दिव्यांगजन सशक्तिकरण संस्थान
niepvd
दिव्यांगजन
देहरादून, (उत्तराखण्ड)

ಕನ್ನಡ ಬ್ರೈಲ್ ಸಂಕುಚಿತಗಳ ಮತ್ತು ಸಂಕ್ಷಿಪ್ತ ಪದಗಳ ಕೈಪಿಡಿ

Manual on Kannada Braille Contractions and Abbreviations

2026

© National Institute for the Empowerment of Persons with Visual Disabilities (Divyangjan), 116 Rajpur Road, Dehradun

Manual on Kannada Braille Contractions and Abbreviations

ಕನ್ನಡ ಬ್ರೈಲ್ ಸಂಕುಚಿತಗಳ ಮತ್ತು ಸಂಕ್ಷಿಪ್ತ ಪದಗಳ ಕೈಪಿಡಿ

Draft prepared by:
Smt. Rajyashree Satish
Kannada Braille and Language Chief Adviser & Coordinator
Mathruchhaya Braille Resource Centre
(A Unit of Canara Bank Relief & Welfare Society)

Technical & Braille Support:

1. Mrs. Prasanna Parvathi
2. Mrs. Rakhi U.S. Volunteers, MBRC.

Project Facilitator:
Dr. Madhu Singhal, Founder & Managing Trustee, Mitra Jyothi
and President, National Federation of the Blind, India

Coordinated by:

1. Mr. Dipendra Manocha, Director developing countries program, Daisy Consortium member World braille Council
2. Dr. Pankaj Kumar, Assistant Professor, NIEPVD

ಗೌರವ ಸಮರ್ಪಣೆ

ಕನ್ನಡ ಬ್ರೈಲ್ ಸಂಕುಚಿತಗಳು ಮತ್ತು ಸಂಕ್ಷೇಪಗಳ ಕೈಪಿಡಿ
ಕರಡು ಸಿದ್ಧಪಡಿಸಿದವರು:
ಶ್ರೀಮತಿ ರಾಜ್ಯಶ್ರೀ ಸತೀಶ್, ಕನ್ನಡ ಬ್ರೈಲ್ ಮತ್ತು ಭಾಷಾ ಮುಖ್ಯ ಸಲಹೆಗಾರರು ಹಾಗೂ ಸಂಯೋಜಕರು, ಮಾತೃಛಾಯಾ ಬ್ರೈಲ್ ಸಂಪನ್ಮೂಲ ಕೇಂದ್ರ (ಕೆನರಾ ಬ್ಯಾಂಕ್ ರಿಲೀಫ್ ಅಂಡ್ ವೆಲ್ಫೇರ್ ಸೊಸೈಟಿಯ ಒಂದು ಘಟಕ).

ತಾಂತ್ರಿಕ ಮತ್ತು ಬ್ರೈಲ್ ನೆರವು: ಶ್ರೀಮತಿ ಪ್ರಸನ್ನ ಪಾರ್ವತಿ ಮತ್ತು ಶ್ರೀಮತಿ ರಾಖಿ ಯು.ಎಸ್., ಸ್ವಯಂಸೇವಕರು, ಮಾತೃಛಾಯಾ ಬ್ರೈಲ್ ಸಂಪನ್ಮೂಲ ಕೇಂದ್ರ (MBRC).

ಯೋಜನಾ ಸಂಚಾಲಕರು: ಡಾ. ಮಧು ಸಿಂಘಲ್, ಸಂಸ್ಥಾಪಕರು ಮತ್ತು ವ್ಯವಸ್ಥಾಪಕ ಟ್ರಸ್ಟಿ, ಮಿತ್ರ ಜ್ಯೋತಿ, ಹಾಗೂ ಅಧ್ಯಕ್ಷರು, ನ್ಯಾಷನಲ್ ಫೆಡರೇಷನ್ ಆಫ್ ದಿ ಬ್ಲೈಂಡ್, ಇಂಡಿಯಾ.

ಸಂಯೋಜನೆ: ಡಾ. ಪಂಕಜ್ ಕುಮಾರ್, ಸಹಾಯಕ ಪ್ರಾಧ್ಯಾಪಕರು, ಎನ್.ಐ.ಇ.ಪಿ.ವಿ.ಡಿ. ಮತ್ತು ಶ್ರೀ ದೀಪೇಂದ್ರ ಮನೋಚಾ, ನಿರ್ದೇಶಕರು - ಡೆವಲಪಿಂಗ್ ಕಂಟ್ರೀಸ್ ಪ್ರೋಗ್ರಾಮ್, ಸದಸ್ಯರು - ವರ್ಲ್ಡ್ ಬ್ರೈಲ್ ಕೌನ್ಸಿಲ್.

ACKNOWLEDGEMENT

It gives me immense pleasure to present the Manual on Kannada Braille Contractions and Abbreviations, an important milestone in the ongoing efforts to strengthen accessible education and literacy for persons with visual impairment.

Kannada is one of the major Indian languages and serves as the medium of instruction for a large number of visually impaired students across Karnataka. The development of a structured system of Braille contractions and abbreviations is expected to facilitate faster reading and writing, improve efficiency in Braille production, and enhance the learning experience of Braille users.

The initiative to review Kannada Braille and develop contractions was undertaken under the guidance of the Braille Council of India, which entrusted Mitra Jyothi, Bengaluru, with this important responsibility. I commend the dedication and perseverance of the committee members, language experts, Braille practitioners, educators, and organizations who worked tirelessly over several years to develop a scientifically structured and learner-friendly system of contractions and abbreviations.

I place on record my sincere appreciation to Dr. Madhu Singhal, Founder and Managing Trustee, Mitra Jyothi, and President, National Federation of the Blind, India for providing visionary leadership and serving as Chairperson of the Review Committee. Her commitment to advancing accessible education has been instrumental in bringing this initiative to fruition.

My special thanks are due to Mrs. Rajyashree Satish, Coordinator, Mathruchhaya Braille Resource Centre (MBRC), Bengaluru, for preparing the final draft and contributing her expertise in the Kannada language and Braille. I also sincerely acknowledge the valuable contributions of Mrs. Prasanna Parvathi and Mrs. Rakhi U.S. of MBRC, a wing of the Canara Bank Relief & Welfare Society, whose technical expertise and dedicated support were instrumental in this endeavour.

I further acknowledge the contributions of Mr. Srinivasa Murthy, representing National Federation of the Blind Karnataka; Smt. Uma Rao Kolar; Mr. Chandrashekar; and the many teachers, Braille professionals, and volunteers whose technical guidance and valuable feedback strengthened the final recommendations.

My sincere appreciation is also extended to Asha Kiran School for the Blind, Chikkamagaluru, Sri Ranga Rao Memorial School for the Blind, Mysuru, and the staff members of MBRC who facilitated trial runs and validation exercises. I particularly thank the visually impaired students who actively participated in testing the contractions and abbreviations and provided practical insights that greatly enriched this work.

The collaborative efforts of Mitra Jyothi, MBRC, National Federation of the Blind Karnataka, Braille experts, educators, transcribers, and members of the visually

impaired community have resulted in a comprehensive and systematic manual that will benefit generations of Braille readers and writers.

I would also like to express my sincere gratitude to Mr. Dipendra Manocha, Director developing countries program, Daisy Consortium member, World braille Council and Dr. Pankaj Kumar, Assistant Professor, NIEPVD for their valuable guidance, encouragement, and unwavering support extended to the team throughout the development of this manual.

I am confident that this publication will serve as a valuable resource for students, teachers, Braille transcribers, rehabilitation professionals, and all stakeholders engaged in promoting inclusive and accessible education.

With best wishes for its successful implementation and widespread adoption.

Director
NIEPVD, Dehradun

ಕೃತಜ್ಞತೆಗಳು

ದೃಷ್ಟಿ ವಿಕಲಚೇತನರಿಗೆ ಸುಲಭವಾಗಿ ಲಭ್ಯವಾಗುವಂತಹ ಶಿಕ್ಷಣ ಮತ್ತು ಸಾಕ್ಷರತೆಯನ್ನು ಬಲಪಡಿಸಲು ನಡೆಯುತ್ತಿರುವ ನಿರಂತರ ಪ್ರಯತ್ನಗಳಲ್ಲಿ ಒಂದು ಪ್ರಮುಖ ಮೈಲಿಗಲ್ಲಾಗಿರುವ "ಕನ್ನಡ ಬ್ರೈಲ್ ಸಂಕುಚಿತಗಳು ಮತ್ತು ಸಂಕ್ಷೇಪಗಳ ಕೈಪಿಡಿ"ಯನ್ನು ಪ್ರಸ್ತುತಪಡಿಸಲು ನನಗೆ ಅಪಾರ ಸಂತೋಷವಾಗುತ್ತದೆ.

ಕನ್ನಡವು ಭಾರತದ ಪ್ರಮುಖ ಭಾಷೆಗಳಲ್ಲಿ ಒಂದಾಗಿದ್ದು, ಕರ್ನಾಟಕದಾದ್ಯಂತ ಅಪಾರ ಸಂಖ್ಯೆಯ ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಶಿಕ್ಷಣ ಮಾಧ್ಯಮವಾಗಿದೆ. ಕನ್ನಡ ಬ್ರೈಲ್ ಸಂಕುಚಿತಗಳು ಮತ್ತು ಸಂಕ್ಷೇಪಗಳ ಕೈಪಿಡಿಯನ್ನು ಅಭಿವೃದ್ಧಿಪಡಿಸಿರುವುದರಿಂದ ಬ್ರೈಲ್ ಬಳಕೆದಾರರು ಹೆಚ್ಚು ವೇಗವಾಗಿ ಓದಲು ಮತ್ತು ಬರೆಯಲು ನೆರವಾಗುತ್ತದೆ, ಬ್ರೈಲ್ ಮುದ್ರಣದ ದಕ್ಷತೆಯನ್ನು ಹೆಚ್ಚಿಸುತ್ತದೆ ಹಾಗೂ ಕಲಿಯುವವರ ಅನುಭವವನ್ನು ಉತ್ತಮಗೊಳಿಸುತ್ತದೆ ಎಂದು ನಿರೀಕ್ಷಿಸಲಾಗಿದೆ.

ಕನ್ನಡ ಬ್ರೈಲ್ ಅನ್ನು ಮರುಪರಿಶೀಲಿಸುವ ಮತ್ತು ಸಂಕ್ಷಿಪ್ತ ರೂಪಗಳನ್ನು ಅಭಿವೃದ್ಧಿಪಡಿಸುವ ಈ ಉಪಕ್ರಮವನ್ನು "ಬ್ರೈಲ್ ಕೌನ್ಸಿಲ್ ಆಫ್ ಇಂಡಿಯಾ (ಬಿ.ಸಿ.ಐ.)" ಮಾರ್ಗದರ್ಶನದಲ್ಲಿ ಕೈಗೊಳ್ಳಲಾಯಿತು. ಬಿ.ಸಿ.ಐ. ಬೆಂಗಳೂರಿನ "ಮಿತ್ರ ಜ್ಯೋತಿ" ಸಂಸ್ಥೆಗೆ ಈ ಪ್ರಮುಖ ಜವಾಬ್ದಾರಿಯನ್ನು ವಹಿಸಿತ್ತು. ವೈಜ್ಞಾನಿಕವಾಗಿ ರಚನಾತ್ಮಕವಾದ ಮತ್ತು ಕಲಿಯುವವರಿಗೆ ಸುಲಭವಾಗುವಂತಹ ಕನ್ನಡ ಬ್ರೈಲ್ ಸಂಕುಚಿತಗಳು ಮತ್ತು ಸಂಕ್ಷೇಪಗಳ ಕೈಪಿಡಿಯನ್ನು ಅಭಿವೃದ್ಧಿಪಡಿಸಲು ಹಲವು ವರ್ಷಗಳ ಕಾಲ ದಣಿವರಿಯದೆ ಶ್ರಮಿಸಿದ ಸಮಿತಿಯ ಸದಸ್ಯರು, ಭಾಷಾ ತಜ್ಞರು, ಬ್ರೈಲ್ ಅಭ್ಯಾಸಿಗಳು, ಶಿಕ್ಷಣ ತಜ್ಞರು ಮತ್ತು ಸಂಘ-ಸಂಸ್ಥೆಗಳ ಸಮರ್ಪಣಾ ಮನೋಭಾವ ಹಾಗೂ ಪರಿಶ್ರಮವನ್ನು ನಾನು ಹೃತ್ಪೂರ್ವಕವಾಗಿ ಶ್ಲಾಘಿಸುತ್ತೇನೆ.

ಈ ಮರುಪರಿಶೀಲನಾ ಸಮಿತಿಯ ಅಧ್ಯಕ್ಷರಾಗಿ ದೂರದರ್ಶಿತ್ವದ ನಾಯಕತ್ವವನ್ನು ನೀಡಿದ ಮಿತ್ರ ಜ್ಯೋತಿ ಸಂಸ್ಥೆಯ ಸಂಸ್ಥಾಪಕರು ಮತ್ತು ವ್ಯವಸ್ಥಾಪಕ ಟ್ರಸ್ಟಿ ಹಾಗೂ ನ್ಯಾಷನಲ್ ಫೆಡರೇಷನ್ ಆಫ್ ದಿ ಬ್ಲೈಂಡ್ (ಇಂಡಿಯಾ) ಅಧ್ಯಕ್ಷರಾದ ಡಾ. ಮಧು ಸಿಂಘಲ್ ಅವರಿಗೆ ನನ್ನ ಪ್ರಾಮಾಣಿಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಸುಲಭ ಗ್ರಾಹ್ಯ ಶಿಕ್ಷಣವನ್ನು ಮುನ್ನಡೆಸುವಲ್ಲಿ ಅವರಿಗಿರುವ ಬದ್ಧತೆಯೇ ಈ ಉಪಕ್ರಮವು ಸಾಕಾರಗೊಳ್ಳಲು ಪ್ರಮುಖ ಕಾರಣವಾಗಿದೆ.

ಈ ಕೈಪಿಡಿಯ ಅಂತಿಮ ಕರಡನ್ನು ಸಿದ್ಧಪಡಿಸಿ, ಕನ್ನಡ ಭಾಷೆ ಮತ್ತು ಬ್ರೈಲ್ ಲಿಪಿಯಲ್ಲಿ ತಮ್ಮ ಅಪಾರ ಜ್ಞಾನವನ್ನು ಧಾರೆ ಎರೆದಿರುವ ಬೆಂಗಳೂರಿನ ಮಾತೃಛಾಯಾ ಬ್ರೈಲ್ ಸಂಪನ್ಮೂಲ ಕೇಂದ್ರದ (MBRC) ಸಂಯೋಜಕರಾದ ಶ್ರೀಮತಿ ರಾಜ್ಯಶ್ರೀ ಸತೀಶ್ ಅವರಿಗೆ ನನ್ನ ವಿಶೇಷ ಧನ್ಯವಾದಗಳು. ಹಾಗೆಯೇ ಕೆನರಾ ಬ್ಯಾಂಕ್ ರಿಲೀಫ್ ಅಂಡ್ ವೆಲ್ಫೇರ್ ಸೊಸೈಟಿಯ ಒಂದು ಅಂಗ ಸಂಸ್ಥೆಯಾದ MBRCಯ ಸ್ವಯಂ ಸೇವಕರಾದ ಶ್ರೀಮತಿ ಪ್ರಸನ್ನ ಪಾರ್ವತಿ ಮತ್ತು ಶ್ರೀಮತಿ ರಾಖಿ ಯು.ಎಸ್. ಅವರ ಅಮೂಲ್ಯವಾದ ಕೊಡುಗೆಯನ್ನು ನಾನು ಪ್ರಾಮಾಣಿಕವಾಗಿ ಸ್ಮರಿಸುತ್ತೇನೆ. ಅವರ ತಾಂತ್ರಿಕ ಪರಿಣತಿ ಮತ್ತು ಸಮರ್ಪಿತ ಬೆಂಬಲವು ಈ ಪ್ರಯತ್ನದಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿದೆ.

ನ್ಯಾಷನಲ್ ಫೆಡರೇಷನ್ ಆಫ್ ದಿ ಬ್ಲೈಂಡ್ ಕರ್ನಾಟಕವನ್ನು ಪ್ರತಿನಿಧಿಸಿದ ಶ್ರೀ ಶ್ರೀನಿವಾಸ ಮೂರ್ತಿ, ಶ್ರೀಮತಿ ಉಮಾ ರಾವ್ ಕೋಲಾರ, MBRC, ಶ್ರೀ ಚಂದ್ರಶೇಖರ್, AKSB ಮತ್ತು ತಾಂತ್ರಿಕ ಮಾರ್ಗದರ್ಶನ ಹಾಗೂ ಅಮೂಲ್ಯವಾದ ಸಲಹೆಗಳನ್ನು ನೀಡಿ ಅಂತಿಮ ಶಿಫಾರಸುಗಳನ್ನು ಬಲಪಡಿಸಿದ ಹಲವಾರು ಶಿಕ್ಷಕರು, ಬ್ರೈಲ್ ವೃತ್ತಿಪರರು ಮತ್ತು ಸ್ವಯಂಸೇವಕರ ಕೊಡುಗೆಗಳನ್ನು ನಾನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಪ್ರಾಯೋಗಿಕ ಪರೀಕ್ಷೆಗಳು ಮತ್ತು ಮೌಲ್ಯೀಕರಣದ ಪ್ರಕ್ರಿಯೆಗಳನ್ನು ಸುಲಭಗೊಳಿಸಿಕೊಟ್ಟ ಚಿಕ್ಕಮಗಳೂರಿನ "ಆಶಾ ಕಿರಣ ಅಂಧರ ಶಾಲೆ", ಮೈಸೂರಿನ "ಶ್ರೀ ರಂಗರಾವ್ ಸ್ಮಾರಕ ಅಂಧರ ಶಾಲೆ" ಮತ್ತು MBRCಯ ಸಿಬ್ಬಂದಿ ವರ್ಗಕ್ಕೆ ನನ್ನ ಪ್ರಾಮಾಣಿಕ ಅಭಿನಂದನೆಗಳು. ವಿಶೇಷವಾಗಿ, ಕನ್ನಡ ಬ್ರೈಲ್ ಸಂಕುಚಿತಗಳು ಮತ್ತು ಸಂಕ್ಷೇಪಗಳ ಕೈಪಿಡಿಯನ್ನು ಪರೀಕ್ಷಿಸುವಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಈ ಕೃತಿಗೆ ಹೆಚ್ಚಿನ ಮೌಲ್ಯ ತಂದುಕೊಟ್ಟ ಪ್ರಾಯೋಗಿಕ ಒಳನೋಟಗಳನ್ನು ನೀಡಿದ ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಮಿತ್ರ ಜ್ಯೋತಿ, MBRC, ನ್ಯಾಷನಲ್ ಫೆಡರೇಷನ್ ಆಫ್ ದಿ ಬ್ಲೈಂಡ್ ಕರ್ನಾಟಕ, ಬ್ರೈಲ್ ತಜ್ಞರು, ಶಿಕ್ಷಕರು, ಲಿಪ್ಯಂತರಕಾರರು ಮತ್ತು ದೃಷ್ಟಿ ವಿಕಲಚೇತನ ಸಮುದಾಯದ ಸದಸ್ಯರ ಜಂಟಿ ಶ್ರಮದ ಫಲವಾಗಿ ಈ ಸಮಗ್ರ ಹಾಗೂ ವ್ಯವಸ್ಥಿತ ಕೈಪಿಡಿಯು ಮೂಡಿಬಂದಿದೆ. ಇದು ಮುಂದಿನ ಹಲವು ತಲೆಮಾರುಗಳ ಬ್ರೈಲ್ ಓದುಗರಿಗೆ ಮತ್ತು ಬರಹಗಾರರಿಗೆ ಪ್ರಯೋಜನಕಾರಿಯಾಗಲಿದೆ.

ಈ ಕೈಪಿಡಿಯ ಅಭಿವೃದ್ಧಿಯ ಸಂಪೂರ್ಣ ಪಯಣದಲ್ಲಿ ತಂಡಕ್ಕೆ ಅಮೂಲ್ಯವಾದ ಮಾರ್ಗದರ್ಶನ, ಪ್ರೋತ್ಸಾಹ ಮತ್ತು ಅಚಲವಾದ ಬೆಂಬಲವನ್ನು ನೀಡಿದ ಅಭಿವೃದ್ಧಿಶೀಲ ರಾಷ್ಟ್ರಗಳ ಕಾರ್ಯಕ್ರಮದ ನಿರ್ದೇಶಕರು ಹಾಗೂ ಡೈಸಿ ಕನ್ಸೋರ್ಷಿಯಂ ಮತ್ತು ವರ್ಲ್ಡ್ ಬ್ರೈಲ್ ಕೌನ್ಸಿಲ್‌ನ ಸದಸ್ಯರಾದ ಶ್ರೀ ದೀಪೇಂದ್ರ ಮನೋಚಾ ಅವರಿಗೂ ಮತ್ತು NIEPVDಯ ಸಹಾಯಕ ಪ್ರಾಧ್ಯಾಪಕರಾದ ಡಾ. ಪಂಕಜ್ ಕುಮಾರ್ ಅವರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸಲು ಬಯಸುತ್ತೇನೆ.

ಈ ಪ್ರಕಟಣೆಯು ವಿದ್ಯಾರ್ಥಿಗಳು, ಶಿಕ್ಷಕರು, ಬ್ರೈಲ್ ಲಿಪ್ಯಂತರಕಾರರು, ಪುನರ್ವಸತಿ ವೃತ್ತಿಪರರು ಮತ್ತು ಸುಲಭ ಗ್ರಾಹ್ಯ ಶಿಕ್ಷಣವನ್ನು ಉತ್ತೇಜಿಸುವಲ್ಲಿ ತೊಡಗಿರುವ ಎಲ್ಲಾ ಪಾಲುದಾರರಿಗೆ ಒಂದು ಅಮೂಲ್ಯವಾದ ಸಂಪನ್ಮೂಲವಾಗಿ ಕಾರ್ಯನಿರ್ವಹಿಸುತ್ತದೆ ಎಂಬ ವಿಶ್ವಾಸ ನನಗಿದೆ.

ಈ ಕೈಪಿಡಿಯ ಯಶಸ್ವಿ ಅನುಷ್ಠಾನ ಮತ್ತು ವ್ಯಾಪಕ ಬಳಕೆಗೆ ನನ್ನ ಶುಭ ಹಾರೈಕೆಗಳು.

ನಿರ್ದೇಶಕರು
ಎನ್‌ಐಇಪಿವಿಡಿ, ಡೆಹ್ರಾಡೂನ್

INTRODUCTION

DEVELOPMENT OF CONTRACTIONS & ABBREVIATIONS FOR KANNADA BRAILLE

Braille has revolutionized access to education, information, and knowledge for persons with visual impairment since its invention in 1824 by Louis Braille at the age of fifteen. The Braille script was introduced in India in 1887, marking a significant step towards inclusive education. Subsequently, in 1951, a unified national Braille system known as Bharati Braille was adopted, providing a common code framework for Indian languages and facilitating uniformity in Braille literacy across the country.

As part of an initiative of the Braille Council of India, the Braille Development Unit of the National Institute for the Empowerment of Persons with Visual Disabilities (Divyangjan) [NIEPVD] undertook a comprehensive project to review, document, and standardize Bharati Braille practices. The publication of **this Manual on Kannada Braille Contractions and Abbreviations is** a significant outcome of that initiative and represents one of the Institute's important contributions towards strengthening Braille education and accessibility in India.
This manual has been developed to serve as a comprehensive reference resource for teachers, transcribers, rehabilitation professionals, students, and all stakeholders engaged in the education and empowerment of persons with visual impairment. It aims to enhance professional knowledge, promote consistency in Braille usage, and support the effective dissemination of Kannada Braille literacy.

The manual comprises of **eleven exercises**, carefully designed to address the professional and practical requirements of Kannada Braille users.

Kannada is the official language of the State of Karnataka and is spoken by nearly 7 crore people. Kannada being one of the Dravidian languages is a phonetic language. Words are pronounced exactly the same way as they are written. There are no words with silent letters.

The visually impaired children in Karnataka study mainly in Kannada Medium including college education. To facilitate fast reading, writing and save time and paper, **BRAILLE CONTRACTIONS** for Kannada is recommended.

In 2014, the Braille Council of India initiated a comprehensive review of Bharati Braille. As part of this effort, Mitra Jyothi – Institution for Skill Development & Inclusion for the Visually Impaired, Bengaluru, was entrusted with the responsibility of reviewing and revising the Kannada Braille code.

A **REVIEW COMMITTEE** was formed on **March 17, 2014,** with the following Members:

- **Dr. Madhu Singhal,** Founder and Managing Trustee of Mitra Jyothi – Institution for Skill Development & Inclusion for the Visually Impaired, served as the Chairperson of the Committee.

- **Mrs. Rajyashree Satish,** Coordinator of Mathruchhaya Braille Resource Centre (MBRC), Bengaluru, with her expertise in the Kannada language and proficiency in both Kannada and English Braille, was entrusted with the responsibility of preparing the draft version of Kannada Bharati Braille.

Mitra Jyothi Braille Press is equipped with modern Braille printing technology and is supported by a team of skilled transcribers and proofreaders. The Press produces textbooks and reading materials in Kannada, English, Hindi, Telegu and other regional languages, while also creating accessible digital formats such as DAISY and EPUB. Through its commitment to quality, accuracy, and accessibility, the Braille Press enables thousands of visually impaired learners to access education and information, promoting inclusion and lifelong learning.

Mathruchhaya Braille Resource Centre (MBRC) is a wing of Canara Bank Relief & Welfare Society (CBR&WS) which is actively involved in the transcription of textbooks and other books of interest in Braille and distributes them to the visually impaired students of Karnataka.

- The committee met on 19 February 2017 in Guwahati at the National-Level Meeting organized by the Braille Council of India. Dr. Madhu Singhal, in consultation with Mrs. Rajyashree Satish of MBRC, presented a suggestion for developing contractions in Kannada Braille.
- Numerous revisions were made following a systematic approach to ensure that the contractions are easy for visually impaired to understand and memorize, while adhering to the rules of Kannada grammar and Unicode standards.
- At this stage, Mrs. Prasanna Parvathi and Mrs. Rakhi U.S. joined the MBRC team, bringing their technical expertise and knowledge of Braille to support the development of a new set of contractions.

LATER DEVELOPMENT

In the meantime, drafts of the contractions were submitted by others where the technicalities of the language were not followed. Therefore, they were not considered.

A 3 Member REVIEW COMMITTEE was constituted on 5th January, 2025 to work together and arrive at one recommendation. The members are:

- Dr. Madhu Singhal, Mitra Jyothi
- Mrs. Rajyashree Satish, MBRC
- Mr. Srinivasa Murthy, representing National Federation of the Blind, Karnataka

ಪೀಠಿಕೆ

ಕನ್ನಡ ಬ್ರೈಲ್ ಸಂಕುಚಿತಗಳು ಮತ್ತು ಸಂಕ್ಷಿಪ್ತ ಪದಗಳ ಕೈಪಿಡಿಯ ಬೆಳವಣಿಗೆ ಲೂಯಿ ಬ್ರೈಲ್ ಅವರು 1824ರಲ್ಲಿ ತಮ್ಮ ಹದಿನೈದನೇ ವಯಸ್ಸಿನಲ್ಲಿ ಬ್ರೈಲ್ ಲಿಪಿಯನ್ನು ಕಂಡುಹಿಡಿದ ದಿನದಿಂದ, ಈ ಲಿಪಿ ದೃಷ್ಟಿ ವಿಕಲಚೇತನರಿಗೆ ಶಿಕ್ಷಣ, ಮಾಹಿತಿ ಮತ್ತು ಜ್ಞಾನದ ಜಗತ್ತನ್ನು ತೆರೆದಿಡುವಲ್ಲಿ ಕ್ರಾಂತಿಕಾರಿ ಬದಲಾವಣೆಯನ್ನು ತಂದಿದೆ. ಭಾರತದಲ್ಲಿ ಬ್ರೈಲ್ ಲಿಪಿಯನ್ನು 1887ರಲ್ಲಿ ಪರಿಚಯಿಸಲಾಯಿತು, ಇದು ಸಮನ್ವಯ ಶಿಕ್ಷಣದ (inclusive education) ದಿಸೆಯಲ್ಲಿ ಒಂದು ಪ್ರಮುಖ ಹೆಜ್ಜೆಯಾಗಿದೆ. ತದನಂತರ, 1951ರಲ್ಲಿ "ಭಾರತಿ ಬ್ರೈಲ್" ಎಂಬ ಏಕರೂಪದ ರಾಷ್ಟ್ರೀಯ ಬ್ರೈಲ್ ಪದ್ಧತಿಯನ್ನು ಅಳವಡಿಸಿಕೊಳ್ಳಲಾಯಿತು. ಇದು ಭಾರತೀಯ ಭಾಷೆಗಳಿಗೆ ಒಂದು ಸಾಮಾನ್ಯ ಸಂಕೇತ ಚೌಕಟ್ಟನ್ನು ಒದಗಿಸಿತು ಮತ್ತು ದೇಶದಾದ್ಯಂತ ಬ್ರೈಲ್ ಸಾಕ್ಷರತೆಯಲ್ಲಿ ಏಕರೂಪತೆಯನ್ನು ತರಲು ನೆರವಾಯಿತು.

"ಬ್ರೈಲ್ ಕೌನ್ಸಿಲ್ ಆಫ್ ಇಂಡಿಯಾ" ಉಪಕ್ರಮದ ಭಾಗವಾಗಿ, "ರಾಷ್ಟ್ರೀಯ ದೃಷ್ಟಿ ವಿಕಲಚೇತನರ ಸಬಲೀಕರಣ ಸಂಸ್ಥೆ"ಯ (NIEPVD) ಬ್ರೈಲ್ ಅಭಿವೃದ್ಧಿ ವಿಭಾಗವು ಭಾರತಿ ಬ್ರೈಲ್ ಪದ್ಧತಿಗಳನ್ನು ಮರುಪರಿಶೀಲಿಸುವ, ದಾಖಲಿಸುವ ಮತ್ತು ಪ್ರಮಾಣೀಕರಿಸುವ ಸಮಗ್ರ ಯೋಜನೆಯನ್ನು ಕೈಗೆತ್ತಿಕೊಂಡಿತು. "ಕನ್ನಡ ಬ್ರೈಲ್ ಸಂಕುಚಿತಗಳು ಮತ್ತು ಸಂಕ್ಷಿಪ್ತ ಪದಗಳ ಕೈಪಿಡಿ"ಯ ಪ್ರಕಟಣೆಯು ಆ ಉಪಕ್ರಮದ ಒಂದು ಮಹತ್ವದ ಫಲಿತಾಂಶವಾಗಿದ್ದು, ಭಾರತದಲ್ಲಿ ಬ್ರೈಲ್ ಶಿಕ್ಷಣ ಮತ್ತು ಸುಲಭ ಗ್ರಾಹ್ಯತೆಯನ್ನು ಬಲಪಡಿಸುವಲ್ಲಿ ಈ ಸಂಸ್ಥೆಯ ಪ್ರಮುಖ ಕೊಡುಗೆಗಳಲ್ಲಿ ಒಂದಾಗಿದೆ.
ದೃಷ್ಟಿ ವಿಕಲಚೇತನರ ಶಿಕ್ಷಣ ಮತ್ತು ಸಬಲೀಕರಣದಲ್ಲಿ ತೊಡಗಿರುವ ಶಿಕ್ಷಕರು, ಲಿಪ್ಯಂತರಕಾರರು, ಪುನರ್ವಸತಿ ವೃತ್ತಿಪರರು, ವಿದ್ಯಾರ್ಥಿಗಳು ಮತ್ತು ಎಲ್ಲಾ ಪಾಲುದಾರರಿಗೆ ಒಂದು ಸಮಗ್ರ ಉಲ್ಲೇಖ ಗ್ರಂಥವಾಗಿ ಬಳಸಲು ಈ ಕೈಪಿಡಿಯನ್ನು ಅಭಿವೃದ್ಧಿಪಡಿಸಲಾಗಿದೆ. ಇದು ವೃತ್ತಿಪರ ಜ್ಞಾನವನ್ನು ಹೆಚ್ಚಿಸುವ, ಬ್ರೈಲ್ ಬಳಕೆಯಲ್ಲಿ ಸ್ಥಿರತೆಯನ್ನು ಉತ್ತೇಜಿಸುವ ಮತ್ತು ಕನ್ನಡ ಬ್ರೈಲ್ ಸಾಕ್ಷರತೆಯ ಪರಿಣಾಮಕಾರಿ ಪ್ರಸಾರಕ್ಕೆ ಬೆಂಬಲ ನೀಡುವ ಗುರಿಯನ್ನು ಹೊಂದಿದೆ.

ಈ ಕೈಪಿಡಿಯು ಕನ್ನಡ ಬ್ರೈಲ್ ಬಳಕೆದಾರರ ವೃತ್ತಿಪರ ಮತ್ತು ಪ್ರಾಯೋಗಿಕ ಅಗತ್ಯಗಳನ್ನು ಪೂರೈಸಲು ಜಾಗರೂಕತೆಯಿಂದ ವಿನ್ಯಾಸಗೊಳಿಸಲಾದ ಹನ್ನೊಂದು ಅಭ್ಯಾಸಗಳನ್ನು ಒಳಗೊಂಡಿದೆ.

ಕನ್ನಡವು ಕರ್ನಾಟಕ ರಾಜ್ಯದ ಅಧಿಕೃತ ಭಾಷೆಯಾಗಿದ್ದು, ಸುಮಾರು 7 ಕೋಟಿ ಜನರು ಇದನ್ನು ಮಾತನಾಡುತ್ತಾರೆ. ದ್ರಾವಿಡ ಭಾಷೆಗಳಲ್ಲಿ ಒಂದಾದ ಕನ್ನಡವು ಒಂದು ಧ್ವನಿರೂಪದ ಭಾಷೆಯಾಗಿದೆ. ಪದಗಳನ್ನು ಹೇಗೆ ಬರೆಯುತ್ತಾರೋ ಹಾಗೆಯೇ ಉಚ್ಚರಿಸಲಾಗುತ್ತದೆ. ಇಲ್ಲಿ ಯಾವುದೇ ಉಚ್ಚರಿಸಲಾಗದ ಅಕ್ಷರಗಳ ಪದಗಳಿರುವುದಿಲ್ಲ.

ಕರ್ನಾಟಕದಲ್ಲಿ ದೃಷ್ಟಿ ವಿಕಲಚೇತನ ಮಕ್ಕಳು ಕಾಲೇಜು ಶಿಕ್ಷಣ ಸೇರಿದಂತೆ ಮುಖ್ಯವಾಗಿ ಕನ್ನಡ ಮಾಧ್ಯಮದಲ್ಲೇ ಕಲಿಯುತ್ತಾರೆ. ವೇಗವಾಗಿ ಓದಲು, ಬರೆಯಲು ಮತ್ತು ಸಮಯ ಹಾಗೂ ಕಾಗದವನ್ನು ಉಳಿಸಲು ಕನ್ನಡಕ್ಕಾಗಿ ಬ್ರೈಲ್ ಸಂಕ್ಷಿಪ್ತ ರೂಪಗಳನ್ನು ಶಿಫಾರಸು ಮಾಡಲಾಗಿದೆ.

2014ರಲ್ಲಿ, ಬ್ರೈಲ್ ಕೌನ್ಸಿಲ್ ಆಫ್ ಇಂಡಿಯಾ, ಭಾರತಿ ಬ್ರೈಲ್‌ನ ಸಮಗ್ರ ಮರುಪರಿಶೀಲನೆಯನ್ನು ಪ್ರಾರಂಭಿಸಿತು. ಈ ಪ್ರಯತ್ನದ ಭಾಗವಾಗಿ, ಬೆಂಗಳೂರಿನ "ಮಿತ್ರ ಜ್ಯೋತಿ" - ದೃಷ್ಟಿವಿಕಲಚೇತನರ ಕೌಶಲ್ಯ ಅಭಿವೃದ್ಧಿ ಮತ್ತು ಸೇರ್ಪಡೆಯ ಸಂಸ್ಥೆಗೆ ಕನ್ನಡ ಬ್ರೈಲ್ ಕೋಡ್ ಅನ್ನು ಪರಿಶೀಲಿಸುವ ಮತ್ತು ಪರಿಷ್ಕರಿಸುವ ಜವಾಬ್ದಾರಿಯನ್ನು ವಹಿಸಲಾಯಿತು.

ಇದಕ್ಕಾಗಿ ಮಾರ್ಚ್ 17, 2014ರಂದು ಈ ಕೆಳಗಿನ ಸದಸ್ಯರನ್ನೊಳಗೊಂಡ ಮರುಪರಿಶೀಲನಾ ಸಮಿತಿಯನ್ನು ರಚಿಸಲಾಯಿತು:

ಮಿತ್ರ ಜ್ಯೋತಿ - ದೃಷ್ಟಿವಿಕಲಚೇತನರ ಕೌಶಲ್ಯ ಅಭಿವೃದ್ಧಿ ಮತ್ತು ಸೇರ್ಪಡೆಯ ಸಂಸ್ಥೆಯ ಸಂಸ್ಥಾಪಕರು ಮತ್ತು ವ್ಯವಸ್ಥಾಪಕ ಟ್ರಸ್ಟಿಯಾದ ಡಾ. ಮಧು ಸಿಂಘಲ್ ಅವರು ಸಮಿತಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು.

ಕನ್ನಡ ಭಾಷೆಯಲ್ಲಿ ಅಪಾರ ಜ್ಞಾನ ಹಾಗೂ ಕನ್ನಡ ಮತ್ತು ಇಂಗ್ಲಿಷ್ ಬ್ರೈಲ್ ಎರಡರಲ್ಲೂ ಪ್ರಾವೀಣ್ಯತೆ ಹೊಂದಿದ್ದ ಬೆಂಗಳೂರಿನ ಮಾತೃಛಾಯಾ ಬ್ರೈಲ್ ಸಂಪನ್ಮೂಲ ಕೇಂದ್ರದ (MBRC) ಸಂಯೋಜಕರಾದ ಶ್ರೀಮತಿ ರಾಜ್ಯಶ್ರೀ ಸತೀಶ್ ಅವರಿಗೆ ಕನ್ನಡ ಭಾರತಿ ಬ್ರೈಲ್‌ನ ಕರಡು ಪ್ರತಿಯನ್ನು ಸಿದ್ಧಪಡಿಸುವ ಜವಾಬ್ದಾರಿಯನ್ನು ವಹಿಸಲಾಯಿತು.

ಮಿತ್ರ ಜ್ಯೋತಿ ಬ್ರೈಲ್ ಪ್ರೆಸ್ ಆಧುನಿಕ ಬ್ರೈಲ್ ಮುದ್ರಣ ತಂತ್ರಜ್ಞಾನವನ್ನು ಹೊಂದಿದ್ದು, ನುರಿತ ಲಿಪ್ಯಂತರಕಾರರು ಮತ್ತು ಕರಡು ಪರಿಶೀಲಕರ ತಂಡದ ಬೆಂಬಲವನ್ನು ಹೊಂದಿದೆ. ಈ ಮುದ್ರಣಾಲಯವು ಕನ್ನಡ, ಇಂಗ್ಲಿಷ್, ಹಿಂದಿ, ತೆಲುಗು ಮತ್ತು ಇತರ ಪ್ರಾದೇಶಿಕ ಭಾಷೆಗಳಲ್ಲಿ ಪಠ್ಯಪುಸ್ತಕಗಳನ್ನು ಹಾಗೂ ಸಾಮಾನ್ಯ ಪುಸ್ತಕಗಳನ್ನು ತಯಾರಿಸುತ್ತದೆ. ಜೊತೆಗೆ ಡೈಸಿ ಮತ್ತು ಇ-ಪಬ್ ನಂತಹ ಸುಲಭ ಗ್ರಾಹ್ಯ ಡಿಜಿಟಲ್ ರೂಪಗಳನ್ನೂ ಸೃಷ್ಟಿಸುತ್ತದೆ. ಗುಣಮಟ್ಟ, ನಿಖರತೆ ಮತ್ತು ಸುಲಭ ಗ್ರಾಹ್ಯತೆಗೆ ಬದ್ಧವಾಗಿರುವ ಈ ಬ್ರೈಲ್ ಪ್ರೆಸ್, ಸಾವಿರಾರು ದೃಷ್ಟಿ ವಿಕಲಚೇತನರಿಗೆ ಶಿಕ್ಷಣ ಮತ್ತು ಮಾಹಿತಿಯನ್ನು ಪಡೆಯಲು ಅನುವು ಮಾಡಿಕೊಡುತ್ತದೆ. ಆ ಮೂಲಕ ಸಮನ್ವಯ ಶಿಕ್ಷಣ ಮತ್ತು ನಿರಂತರ ಕಲಿಕೆಯನ್ನು ಉತ್ತೇಜಿಸುತ್ತಿದೆ.

ಮಾತೃಛಾಯಾ ಬ್ರೈಲ್ ಸಂಪನ್ಮೂಲ ಕೇಂದ್ರವು (MBRC) "ಕೆನರಾ ಬ್ಯಾಂಕ್ ರಿಲೀಫ್ ಅಂಡ್ ವೆಲ್ಫೇರ್ ಸೊಸೈಟಿ"ಯ (CBR&WS) ಒಂದು ಅಂಗಸಂಸ್ಥೆಯಾಗಿದ್ದು, ಇದು ಪಠ್ಯಪುಸ್ತಕಗಳನ್ನು ಮತ್ತು ಇತರ ಆಸಕ್ತಿದಾಯಕ ಪುಸ್ತಕಗಳನ್ನು ಬ್ರೈಲ್ ಲಿಪಿಗೆ ಪರಿವರ್ತಿಸುವಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದೆ ಹಾಗೂ ಅವುಗಳನ್ನು ಕರ್ನಾಟಕದ ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ವಿತರಿಸುತ್ತದೆ.

- 19 ಫೆಬ್ರವರಿ 2017ರಂದು ಗುವಾಹಟಿಯಲ್ಲಿ ಬ್ರೈಲ್ ಕೌನ್ಸಿಲ್ ಆಫ್ ಇಂಡಿಯಾ ಆಯೋಜಿಸಿದ್ದ ರಾಷ್ಟ್ರೀಯ ಮಟ್ಟದ ಸಭೆಯಲ್ಲಿ ಸಮಿತಿಯು ಪಾಲ್ಗೊಂಡು ಚರ್ಚಿಸಿತು. ಡಾ. ಮಧು ಸಿಂಘಲ್ ಅವರು MBRCಯ ಶ್ರೀಮತಿ ರಾಜ್ಯಶ್ರೀ ಸತೀಶ್ ಅವರೊಂದಿಗೆ ಸಮಾಲೋಚಿಸಿ, ಕನ್ನಡ ಬ್ರೈಲ್‌ನಲ್ಲಿ ಸಂಕ್ಷಿಪ್ತ ರೂಪಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ಪ್ರಸ್ತಾವನೆಯನ್ನು ಮಂಡಿಸಿದರು.

- ದೃಷ್ಟಿ ವಿಕಲಚೇತನರು ಈ ಸಂಕ್ಷಿಪ್ತ ರೂಪಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ಮತ್ತು ನೆನಪಿನಲ್ಲಿಟ್ಟುಕೊಳ್ಳಲು ಅನುವಾಗುವಂತೆ ಹಾಗೂ ಕನ್ನಡ ವ್ಯಾಕರಣದ ನಿಯಮಗಳು ಮತ್ತು ಯೂನಿಕೋಡ್ ಮಾನದಂಡಗಳಿಗೆ ಬದ್ಧವಾಗಿರುವಂತೆ ನೋಡಿಕೊಳ್ಳಲು ಒಂದು ವ್ಯವಸ್ಥಿತ ವಿಧಾನವನ್ನು ಅನುಸರಿಸಿ ಹಲವಾರು ತಿದ್ದುಪಡಿಗಳನ್ನು ಮಾಡಲಾಯಿತು.

- ಈ ಹಂತದಲ್ಲಿ, ಶ್ರೀಮತಿ ಪ್ರಸನ್ನ ಪಾರ್ವತಿ ಮತ್ತು ಶ್ರೀಮತಿ ರಾಖಿ ಯು.ಎಸ್. ಅವರು ತಂಡವನ್ನು ಸೇರಿಕೊಂಡರು. ಹೊಸ ಸಂಕ್ಷಿಪ್ತ ರೂಪಗಳ ಅಭಿವೃದ್ಧಿಗೆ ಬೆಂಬಲ ನೀಡಲು ಅವರು ತಮ್ಮ ತಾಂತ್ರಿಕ ಪರಿಣತಿ ಮತ್ತು ಬ್ರೈಲ್ ಲಿಪಿಯ ಜ್ಞಾನವನ್ನು ಬಳಸಿಕೊಂಡರು.

ನಂತರದ ಬೆಳವಣಿಗೆ:
ಈ ಮಧ್ಯೆ, ಇತರರು ಸಿದ್ಧಪಡಿಸಿದ ಸಂಕ್ಷಿಪ್ತ ರೂಪಗಳ ಕರಡು ಪ್ರತಿಗಳನ್ನು ಸಲ್ಲಿಕೆ ಮಾಡಲಾಯಿತು. ಆದರೆ ಇವುಗಳಲ್ಲಿ ಭಾಷೆಯ ತಾಂತ್ರಿಕ ನಿಯಮಗಳನ್ನು ಪಾಲಿಸದಿರುವ
ಕಾರಣ ಇವುಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಿಲ್ಲ.

ಎಲ್ಲರೂ ಒಟ್ಟಾಗಿ ಕೆಲಸ ಮಾಡಿ, ಒಂದೇ ಅಂತಿಮ ಶಿಫಾರಸನ್ನು ಸಿದ್ಧಪಡಿಸಲು 2025ರ ಜನವರಿ 5ರಂದು, ಮೂವರು ಸದಸ್ಯರ ಪರಿಶೀಲನಾ ಸಮಿತಿಯನ್ನು ರಚಿಸಲಾಯಿತು. ಅದರ ಸದಸ್ಯರು ಹೀಗಿದ್ದಾರೆ:

- ಡಾ. ಮಧು ಸಿಂಘಲ್, ಮಿತ್ರ ಜ್ಯೋತಿ
- ಶ್ರೀಮತಿ ರಾಜ್ಯಶ್ರೀ ಸತೀಶ್, ಎಂ.ಬಿ.ಆರ್.ಸಿ
- ಶ್ರೀ ಶ್ರೀನಿವಾಸ ಮೂರ್ತಿ, ಕರ್ನಾಟಕದ ಪ್ರತಿನಿಧಿ, ಎನ್.ಎಫ್.ಬಿ.

CONTENTS

Braille Kannada Alphabet
Explanation of Kannada Braille - Word Contractions and Abbreviations
Rules for Using Kannada Braille - Word Contractions

Exercise 1:
1.1 Contractions of Vowels (*Swaraaksharagalu*)
1.2 Contractions of Classified Consonants (*Vargeeya Vyanjanagalu*)
1.3 Contractions of Unclassified Consonants (*Avargeeya Vyanjanagalu*)

Exercise 2: Word Contractions with Dot 2
2.1 Short Vowel Contractions with Dot 2 (*Hraswa Swaragalu*)
2.2 Unaspirated Classified Consonant Contractions with Dot 2 (*Alpapraanada Vargeeya Vyanjanagalu*)
2.3 Unclassified Consonant Word Contractions with Dot 2 (*Avargeeya Vyanjanaakshara* words)

Exercise 3: Word Contractions with Dots 2-3
3.1 Long Vowel Contractions with Dots 2-3 (*Dheerga Swaragalu*)
3.2 Classified Consonant Word Contractions with Dots 2-3 (*Mahapraana Vargeeya Vyanjanaakshara* Words)
3.3 Unclassified Consonant Word Contractions with Dots 2-3 (*Avargeeya Vyanjanaakshara* words)

Exercise 4: Contractions with Dot 4
Exercise 5: Word Contractions with Dots 2-3-5 – Days of the Week
Exercise 6: Word Contractions with Dot 5 – Months
Exercise 7: Word Contractions with Dots 1-3-5-6 – Directions
Exercise 8: Suffix (*pratyaya*) Contractions
8.1 Suffix Contractions with Dots 2-5 – “ಬಹುದು” (*bahudu*)
8.2 Suffix Contractions with Dots 2-5-6
8.3 Suffix Contractions with Dots 3-6 – “ಗೋಸ್ಕರ” (*gōskara*)
8.4 Suffix Contractions with Dots 1-2-3-5-6
8.5 Suffix Contractions with Dots 1-3-5-6
8.6 Suffix Contractions with Dots 1-2-4-5-6 – “ಗಳ” (*gala*)

Exercise 9: Consonant cluster Indicators (*samyuktaakshara suuchakagalu)*
9.1 Dots 4-5-6: “ಪ್ರ” (*Pra*) *samyuktaakshara suuchakagalu*
9.2 Dot 5: “ಷ್ಟ” (*Shtha*) *samyuktaakshara suuchakagalu*
9.3 Dots 3-4-6: “ಸ್ವ” (*Sva*) *samyuktaakshara suuchakagalu*

Exercise 10: Homotypic consonant cluster Indicator (*Sajaateeya Ottakshara suuchaka*)

Exercise 11: Abbreviation of Compound Words (*Samyukta padagalu*)

ಪರಿವಿಡಿ CONTENTS:

ಬ್ರೈಲ್ ಕನ್ನಡ ವರ್ಣಮಾಲೆ

ಕನ್ನಡ ಬ್ರೈಲ್ ಪದ ಸಂಕುಚಿತ ಮತ್ತು ಸಂಕ್ಷೇಪಗಳ ವಿವರಣೆ

ಕನ್ನಡ ಬ್ರೈಲ್ ಪದ ಸಂಕುಚಿತಗಳ ಬಳಕೆಯ ನಿಯಮಗಳು

ಅಭ್ಯಾಸ 1:

1.1 ಸ್ವರಾಕ್ಷರಗಳ ಸಂಕುಚಿತಗಳು

1.2 ವರ್ಗೀಯ ವ್ಯಂಜನಗಳ ಸಂಕುಚಿತಗಳು

1.3 ಅವರ್ಗೀಯ ವ್ಯಂಜನಗಳ ಸಂಕುಚಿತಗಳು

ಅಭ್ಯಾಸ 2: ಡಾಟ್ 2ರ ಜೊತೆಗಿನ ಪದ ಸಂಕುಚಿತಗಳು

2.1 ಡಾಟ್ 2ರ ಜೊತೆಗಿನ ಹ್ರಸ್ವ ಸ್ವರಗಳ ಸಂಕುಚಿತಗಳು

2.2 ಡಾಟ್ 2ರ ಜೊತೆಗಿನ ಅಲ್ಪಪ್ರಾಣದ ವರ್ಗೀಯ ವ್ಯಂಜನ ಸಂಕುಚಿತಗಳು

2.3 ಡಾಟ್ 2ರ ಜೊತೆಗಿನ ಅವರ್ಗೀಯ ವ್ಯಂಜನಾಕ್ಷರ ಪದಗಳ ಸಂಕುಚಿತಗಳು

ಅಭ್ಯಾಸ 3: ಡಾಟ್ಸ್ 2-3ರ ಜೊತೆಗಿನ ಪದ ಸಂಕುಚಿತಗಳು

3.1 ಡಾಟ್ಸ್ 2-3ರ ಜೊತೆಗಿನ ದೀರ್ಘ ಸ್ವರಗಳ ಸಂಕುಚಿತಗಳು

3.2 ಡಾಟ್ಸ್ 2-3ರ ಜೊತೆಗಿನ ಮಹಾಪ್ರಾಣ ವರ್ಗೀಯ ವ್ಯಂಜನಾಕ್ಷರ ಪದಗಳ ಸಂಕುಚಿತಗಳು

3.3 ಡಾಟ್ಸ್ 2-3ರ ಜೊತೆಗಿನ ಅವರ್ಗೀಯ ವ್ಯಂಜನ ಪದಗಳ ಸಂಕುಚಿತಗಳು

ಅಭ್ಯಾಸ 4: ಡಾಟ್ಸ್ 4ರ ಜೊತೆಗಿನ ಸಂಕುಚಿತಗಳು

ಅಭ್ಯಾಸ 5: ಡಾಟ್ 2-3-5ರ ಜೊತೆಗಿನ ಪದ ಸಂಕುಚಿತಗಳು - ವಾರಗಳು

ಅಭ್ಯಾಸ 6: ಡಾಟ್ 5ರ ಜೊತೆಗಿನ ಪದ ಸಂಕುಚಿತಗಳು - ತಿಂಗಳುಗಳು

ಅಭ್ಯಾಸ 7: ಡಾಟ್ಸ್1-3-5-6ರ ಜೊತೆಗಿನ ಪದ ಸಂಕುಚಿತಗಳು – ದಿಕ್ಕುಗಳು

ಅಭ್ಯಾಸ 8: ಪ್ರತ್ಯಯ ಸಂಕ್ಷೇಪ ಮತ್ತು ಸೂಚಕಗಳ ಬಳಕೆ

8.1 ಡಾಟ್ಸ್ 2-5 ಜೊತೆಗಿನ ಪ್ರತ್ಯಯ ಸಂಕುಚಿತ - “ಬಹುದು”

8.2 ಡಾಟ್ಸ್ 2-5-6 ಜೊತೆಗಿನ ಪ್ರತ್ಯಯ ಸಂಕುಚಿತ

8.3 ಡಾಟ್ಸ್ 3-6 ಜೊತೆಗಿನ ಪ್ರತ್ಯಯ ಸಂಕುಚಿತ - “ಗೋಸ್ಕರ”

8.4 ಡಾಟ್ಸ್1-2-3-5-6 ಜೊತೆಗಿನ ಪ್ರತ್ಯಯ ಸಂಕುಚಿತ

8.5 ಡಾಟ್ಸ್ 1-3-5-6 ಜೊತೆಗಿನ ಪ್ರತ್ಯಯ ಸಂಕುಚಿತ

8.6 ಡಾಟ್ಸ್ 1-2-4-5-6 ಜೊತೆಗಿನ ಪ್ರತ್ಯಯ ಸಂಕುಚಿತ - “ಗಳ”

ಅಭ್ಯಾಸ 9: ಸಂಕುಚಿತಗಳ ಸೂಚಕಗಳು

9.1 ಡಾಟ್ಸ್ 4-5-6: “ಪ್ರ” ಸಂಕುಚಿತ ಸೂಚಕ

9.2 ಡಾಟ್ 5: “ಷ್ಟ” ಸಂಕುಚಿತ ಸೂಚಕ

9.3 ಡಾಟ್ಸ್ 3-4-6: “ಸ್ವ” ಸಂಕುಚಿತ ಸೂಚಕ

ಅಭ್ಯಾಸ 10: ಸಜಾತೀಯ ಒತ್ತಕ್ಷರ ಸೂಚಕ

ಅಭ್ಯಾಸ 11: ಸಂಯುಕ್ತ ಪದಗಳ ಸಂಕ್ಷಿಪ್ತಗಳು

Explanation of Kannada Braille Contractions and Abbreviations

Kannada Braille contractions and abbreviations are presented across 11 exercises. At the beginning of each exercise, an explanation is provided regarding the methodology adopted for selecting the Contractions and Abbreviations. At the end of each exercise, only a few examples of usage are provided as a model. Students can apply these rules to the remaining words accordingly. This approach will be helpful for learners. Teachers and students can use these Contractions and Abbreviations in appropriate contexts according to the rules detailed below.

When formulating Kannada Braille word Contractions and Abbreviations, it is essential to keep the rules of Kannada grammar and Braille writing in mind. Teaching children standard language, correct grammar and clear pronunciation is of utmost importance. While the primary objective of creating Contractions and Abbreviations is to save space and time, they cannot be used arbitrarily. Therefore, a logical approach has been adopted in designing the structure of Kannada Braille Contractions and Abbreviations, which will effectively aid the learning process.

For certain letters of the alphabet, specific words have been designated, while for others, frequently used prefixes (letter combinations added before nouns and verb roots) have been assigned. The contractions designated for these letter combinations function extensively like prefixes, thereby saving considerable space and time.

Exercise 1 features single-letter Contractions. Although some of these letter combinations may not have independent meaning on their own, they combine with other vowels and are extensively used, which significantly helps in saving space in Braille writing.

Exercise 2 provides word Contractions for short vowels and consonants (*Hraswa & Alpapraana*) in combination with Braille Dot 2.

Exercise 3 provides word Contractions for long vowels and consonants (*Deergha & Mahapraana*) in combination with Braille Dots 2-3. This methodology makes it easier for children to understand the usage and pronunciation of short, long, characters, while also making it simpler to memorize the contractions. For unclassified consonants (*Avargeeya Vyanjana*), contractions are provided using Dot 2 and Dots 2-3, as unclassified consonants do not have a distinction between short and long forms.

Exercise 4 introduces word Contractions starting with vowels in combination with Dot 4.

Exercise 5 presents word Contractions using Dots 2-3-5 to denote the days of the week.

Exercise 6 presents word Contractions using Dot 5 to denote the months.

Exercise 7 presents word Contractions using Dots 1-3-5-6 to denote the eight cardinal directions.

Exercise 8 provides suffix contractions using combinations of Dots 2-5, Dots 2-5-6, Dots 3-6, Dots 1-3-5-6, Dots 1-2-3-5-6 and Dots 1-2-4-5-6.

Exercise 9 provides Consonant cluster Indicators for the conjunct letters *Pra* (ಪ್ರ), *Shtha* (ಷ್ಠ) and *Sva* (ಸ್ವ).

Exercise 10 utilizes Dot 3 as the Homotypic consonant cluster Indicator (*Sajaateeya Ottakshara suuchaka*).

Exercise 11 features Abbreviations for compound words (*Samyukta padagalu*).

ಕನ್ನಡ ಬ್ರೈಲ್ ಪದ ಸಂಕುಚಿತ ಮತ್ತು ಸಂಕ್ಷಿಪ್ತಗಳ **ವಿವರಣೆ**
Explanation of Kannada Braille Contractions and Abbreviations

ಕನ್ನಡ ಬ್ರೈಲ್ ಸಂಕುಚಿತಗಳು (Contractions) ಮತ್ತು ಸಂಕ್ಷಿಪ್ತ (Abbreviations)ಗಳನ್ನು 11 ಅಭ್ಯಾಸಗಳಲ್ಲಿ ನೀಡಲಾಗಿದೆ. ಪ್ರತಿ ಅಭ್ಯಾಸದ ಪ್ರಾರಂಭದಲ್ಲಿ, ಸಂಕುಚಿತ ಹಾಗೂ ಸಂಕ್ಷೇಪ ಪದಗಳ ಆಯ್ಕೆಯಲ್ಲಿ ಅನುಸರಿಸಿರುವ ಕ್ರಮದ ಬಗ್ಗೆ ವಿವರಣೆಯನ್ನು ನೀಡಲಾಗಿದೆ. ಅಭ್ಯಾಸದ ಕೊನೆಯಲ್ಲಿ ಸಂಕುಚಿತ ಪದಗಳ ಬಳಕೆಯ ಬಗ್ಗೆ ಕೆಲವು ಉದಾಹರಣೆಗಳನ್ನು ಮಾತ್ರ ಮಾದರಿಯಾಗಿ ನೀಡಲಾಗಿದೆ. ಅದರಂತೆ ವಿದ್ಯಾರ್ಥಿಗಳು ಮಿಕ್ಕ ಪದಗಳಿಗೆ ಬಳಕೆ ಡಿಕೊಳ್ಳಬಹುದು. ಇದು ಕಲಿಯುವವರಿಗೆ ಸಹಾಯಕವಾಗುತ್ತದೆ. ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳು ಸೂಕ್ತ ಸ್ಥಳಗಳಲ್ಲಿ ಸಂಕುಚಿತಗಳನ್ನು ಮುಂದೆ ನೀಡಿರುವ ನಿಯಮಾನುಸಾರ ಬಳಸಬಹುದು.

ಕನ್ನಡ ಬ್ರೈಲ್ ಪದಗಳ ಸಂಕುಚಿತ ಮತ್ತು ಸಂಕ್ಷೇಪಗಳನ್ನು ರೂಪಿಸುವಾಗ ಕನ್ನಡ ವ್ಯಾಕರಣ ಮತ್ತು ಬ್ರೈಲ್ ಬರಹದ ನಿಯಮಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಮಕ್ಕಳಿಗೆ ಶುದ್ಧ ಭಾಷೆ, ವ್ಯಾಕರಣ ಮತ್ತು ಸ್ಪಷ್ಟ ಉಚ್ಚಾರಣೆ ಕಲಿಸುವುದು ಬಹು ಮುಖ್ಯ.

ಸಂಕುಚಿತ ಮತ್ತು ಸಂಕ್ಷೇಪಗಳನ್ನು ರೂಪಿಸುವುದೇ ಸ್ಥಳ ಮತ್ತು ಸಮಯದ ಉಳಿತಾಯವಾಗಬೇಕೆಂದು. ಹಾಗೆಂದು ಸ್ವಚ್ಛಂದ ಸಂಕ್ಷೇಪಗಳ ಬಳಕೆ ಮಾಡಲಾಗುವುದಿಲ್ಲ. ಆದ್ದರಿಂದ, ಬ್ರೈಲ್ ಕನ್ನಡ ಸಂಕುಚಿತ ಮತ್ತು ಸಂಕ್ಷೇಪ ಪದಗಳ ರಚನೆಯಲ್ಲಿ ತಾರ್ಕಿಕ ನಿಲುವನ್ನು ತೆಗೆದುಕೊಳ್ಳಲಾಗಿದೆ. ಕಲಿಯುವಿಕೆಯಲ್ಲಿ ಈ ವಿಧಾನ ಸಹಕಾರಿಯಾಗುತ್ತದೆ.

ವರ್ಣಮಾಲೆಯ ಕೆಲವು ಅಕ್ಷರಗಳಿಗೆ ಪದಗಳನ್ನು, ಮತ್ತೆ ಕೆಲವು ಅಕ್ಷರಗಳಿಗೆ ಬಹುವಾಗಿ ಬಳಕೆಯಾಗುವ ಉಪಸರ್ಗಗಳನ್ನು (ನಾಮ ಮತ್ತು ಧಾತುವಿನ ಹಿಂದೆ ಸೇರುವ ಅಕ್ಷರ ಸಮುದಾಯ) ಗೊತ್ತುಪಡಿಸಲಾಗಿದೆ. ಅಕ್ಷರ ಸಮುದಾಯಗಳಿಗೆ ನಿಗದಿಪಡಿಸಿರುವ ಸಂಕುಚಿತಗಳು ಉಪಸರ್ಗಗಳಂತೆ ಬಹಳವಾಗಿ ಬಳಕೆಯಾಗುತ್ತವೆ. ಇದರಿಂದಾಗಿ ಸ್ಥಳದ ಹಾಗೂ ಸಮಯದ ಉಳಿತಾಯವಾಗುತ್ತದೆ.

ಅಭ್ಯಾಸ 1ರಲ್ಲಿ ಏಕಾಕ್ಷರ ಸಂಕುಚಿತಗಳನ್ನು ನೀಡಲಾಗಿದೆ. ಕೆಲವು ಅಕ್ಷರ ಸಮೂಹಕ್ಕೆ ಅರ್ಥವಿಲ್ಲದಿದ್ದರು ಅವುಗಳೊಂದಿಗೆ ಬೇರೆ ಸ್ವರಗಳು ಸೇರಿ ಬಹುವಾಗಿ ಉಪಯೋಗಿಸಲ್ಪಡುತ್ತದೆ. ಇದು ಬ್ರೈಲ್ ಬರಹದಲ್ಲಿ ಸ್ಥಳದ ಉಳಿತಾಯವಾಗುವುದಕ್ಕೆ ಸಹಕಾರಿಯಾಗುತ್ತದೆ.

ಅಭ್ಯಾಸ 2ರಲ್ಲಿ ಬ್ರೈಲ್ ಡಾಟ್ 2ರ ಸಂಯೋಜನೆಯೊಂದಿಗೆ ಹ್ರಸ್ವ ಮತ್ತು ಅಲ್ಪ ಪ್ರಾಣದ ಅಕ್ಷರಗಳ ಪದಗಳನ್ನು ನೀಡಲಾಗಿದೆ.

ಅಭ್ಯಾಸ 3ರಲ್ಲಿ ಬ್ರೈಲ್ ಡಾಟ್ಸ್2-3ರ ಸಂಯೋಜನೆಯೊಂದಿಗೆ ದೀರ್ಘ ಮತ್ತು ಮಹಾಪ್ರಾಣಗಳ ಪದಗಳನ್ನು ನೀಡಲಾಗಿದೆ. ಈ ವಿಧಾನದಿಂದ ಮಕ್ಕಳಿಗೆ ಹ್ರಸ್ವ, ಅಲ್ಪಪ್ರಾಣ, ದೀರ್ಘ ಮತ್ತು ಮಹಾಪ್ರಾಣದ ಅಕ್ಷರಗಳ ಬಳಕೆ ಮತ್ತು ಉಚ್ಚಾರಣೆ ಸುಲಭವಾಗುತ್ತದೆ. ಸಂಕುಚಿತಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳುವುದೂ ಸರಳವಾಗುತ್ತದೆ. ಅವರ್ಗೀಯ ವ್ಯಂಜನಗಳಿಗೆ ಡಾಟ್ 2 ಮತ್ತು ಡಾಟ್ಸ್ 2-3ರೊಂದಿಗೆ ಸಂಕುಚಿತಗಳನ್ನು ನೀಡಲಾಗಿದೆ. ಅವರ್ಗೀಯ ವ್ಯಂಜನಗಳಿಗೆ ಹ್ರಸ್ವ ಮತ್ತು ದೀರ್ಘಗಳ ವಿಭಜನೆಯಿಲ್ಲ.
ಅಭ್ಯಾಸ 4ರಲ್ಲಿ ಡಾಟ್4ರ ಸಂಯೋಗದಲ್ಲಿ ಸ್ವರಾಕ್ಷರದಿಂದ ಪ್ರಾರಂಭವಾಗುವ ಪದಗಳ ಸಂಕುಚಿತವನ್ನು ನೀಡಲಾಗಿದೆ.

ಅಭ್ಯಾಸ 5ರಲ್ಲಿ, ಡಾಟ್ 2-3-5ರ ಜೊತೆಗಿನ ಪದ ಸಂಕುಚಿತಗಳು ವಾರಗಳನ್ನು ಸೂಚಿಸುತ್ತವೆ.

ಅಭ್ಯಾಸ 6ರಲ್ಲಿ, ಡಾಟ್ 5ರ ಜೊತೆಗಿನ ಪದ ಸಂಕುಚಿತಗಳು ತಿಂಗಳುಗಳನ್ನು ಸೂಚಿಸುತ್ತವೆ.

ಅಭ್ಯಾಸ 7ರಲ್ಲಿ, ಡಾಟ್ಸ್1-3-5-6ರ ಜೊತೆಗಿನ ಪದ ಸಂಕುಚಿತಗಳು ಅಷ್ಟ ದಿಕ್ಕುಗಳನ್ನು ಸೂಚಿಸುತ್ತವೆ.

ಅಭ್ಯಾಸ 8ರಲ್ಲಿ, ಪ್ರತ್ಯಯ ಸಂಕುಚಿತಗಳನ್ನು ಡಾಟ್ಸ್ **2-5,** ಡಾಟ್ಸ್ **2-5-6,** ಡಾಟ್ಸ್ **3-6,** ಡಾಟ್ಸ್ **1-3-5-6,** ಡಾಟ್ಸ್**1-2-3-5-6** ಮತ್ತು ಡಾಟ್ಸ್**1-2-4-5-6** ಸಂಯೋಜನೆಗಳಲ್ಲಿ ನೀಡಲಾಗಿದೆ.
ಅಭ್ಯಾಸ 9ರಲ್ಲಿ, ಪ್ರ, ಷ್ಟ ಮತ್ತು ಸ್ವ ಸಂಯುಕ್ತಾಕ್ಷರಗಳಿಗೆ ಸಂಕುಚಿತ ಸೂಚಕಗಳನ್ನು ನೀಡಲಾಗಿದೆ.

ಅಭ್ಯಾಸ 10ರಲ್ಲಿ, ಸಜಾತೀಯ ಒತ್ತಕ್ಷರ ಚಿಹ್ನೆಯಾಗಿ ಡಾಟ್ 3ಯನ್ನು ಬಳಸಲಾಗಿದೆ.

ಅಭ್ಯಾಸ 11ರಲ್ಲಿ, ಸಂಯುಕ್ತ ಪದಗಳ ಸಂಕ್ಷಿಪ್ತಗಳನ್ನು ನೀಡಲಾಗಿದೆ.

Guidelines for Using Contractions in Kannada Braille

1. All contractions can be used both as independent words and as parts of other words.

2. If a word combines with another word or a suffix and undergoes a phonetic transformation (*Sandhi*), contractions can still be used, provided there is no change in the Braille representation. Different vowels can be added to the contractions during usage, as this does not alter the Braille writing.

3. When a contracted word combines with another suffix or word at either the beginning or at the end of a phrase and a *Sandhi* occurs between the two, that generates a completely new character in the blended word, the contractions cannot be used.

4. When a word combines with another suffix or word at the beginning or end of a phrase and undergoes a *Sandhi*, the contractions can be used as long as it does not cause any discrepancies or changes in the Braille writing.

5. If two individual contractions combine to form a new word with a different meaning, only one contraction should be used in that context.

6. If a contraction exists for a word that contains a conjunct consonant (*Ottakshara*), the contraction itself must be used. In such cases, the conjunct indicator should not be used.

ಕನ್ನಡ ಬ್ರೈಲ್ ಪದ ಸಂಕುಚಿತಗಳ ಬಳಕೆಯ ಮಾರ್ಗಸೂಚಿ.
Guidelines for Using Contractions in Kannada Braille

1. ಎಲ್ಲ ಸಂಕುಚಿತಗಳನ್ನು ಸ್ವತಂತ್ರವಾಗಿಯೂ ಮತ್ತು ಪದಗಳ ಭಾಗವಾಗಿಯೂ ಬಳಸಬಹುದು.

2. ಒಂದು ಪದ, ಮತ್ತೊಂದು ಪದ ಅಥವಾ ಪ್ರತ್ಯಯದೊಂದಿಗೆ ಬಳಸಿದಾಗ ಸಂಧಿಯಾದರೂ, ಬ್ರೈಲ್ ಬರಹದಲ್ಲಿ ವ್ಯತ್ಯಾಸವಾಗದಿದ್ದರೆ, ಸಂಕುಚಿತಗಳನ್ನು ಬಳಸಬಹುದು. ಸಂಕುಚಿತಗಳಿಗೆ ಬೇರೆ ಬೇರೆ ಸ್ವರಾಕ್ಷರಗಳನ್ನು ಸೇರಿಸಿಕೊಂಡು ಬಳಸಬಹುದು. ಬ್ರೈಲ್ ಬರವಣಿಗೆಯಲ್ಲಿ ವ್ಯತ್ಯಾಸವಾಗುವುದಿಲ್ಲ.

3. ಸಂಕುಚಿತ ಪದ, ಇನ್ನೊಂದು ಪ್ರತ್ಯಯ ಅಥವಾ ಪದಗಳ ಜೊತೆ, ಪದದ ಆದಿಯಲ್ಲಿ ಅಥವಾ ಅಂತ್ಯದಲ್ಲಿ, ಬಳಸಿದಾಗ, ಎರಡು ಪದಗಳ ನಡುವೆ ಸಂಧಿಯಾಗಿ, ಹೊಸದಾಗಿ ಒಂದು ಅಕ್ಷರ, ಸಂಧಿ ಪದದಲ್ಲಿ ಬಂದರೆ, ಸಂಕುಚಿತಗಳನ್ನು ಬಳಸಲಾಗುವುದಿಲ್ಲ.

4. ಒಂದು ಪದ, ಇನ್ನೊಂದು ಪ್ರತ್ಯಯ ಅಥವಾ ಪದಗಳ ಜೊತೆ ಪದದ ಆದಿಯಲ್ಲಿ ಅಥವಾ ಅಂತ್ಯದಲ್ಲಿ ಬಳಸಿದಾಗ, ಎರಡು ಪದಗಳ ನಡುವೆ ಸಂಧಿಯಾಗಿ ಬ್ರೈಲ್ ಬರಹದಲ್ಲಿ ವ್ಯತ್ಯಾಸವಾಗದಿದ್ದರೆ, ಸಂಕುಚಿತಗಳನ್ನು ಉಪಯೋಗಿಸಬಹುದು.

5. ಎರಡು ಸಂಕುಚಿತಗಳು ಸೇರಿ ಮತ್ತೊಂದು ಅರ್ಥ ಕೊಡುವ ಪದವಾದರೆ, ಅಂತಹ ಸಂದರ್ಭದಲ್ಲಿ ಒಂದೇ ಸಂಕುಚಿತವನ್ನು ಬಳಸಬೇಕು.

6. ಒಂದು ಒತ್ತಕ್ಷರದ ಪದಕ್ಕೆ ಸಂಕುಚಿತವಿದ್ದರೆ, ಸಂಕುಚಿತವನ್ನೇ ಬಳಸಬೇಕು. ಒತ್ತಕ್ಷರದ ಸೂಚಕ (Conjunct Consonant Indicator) ಬಳಸುವುದು ಬೇಡ.

ಕನ್ನಡ ವರ್ಣಮಾಲೆ
Kannada Alphabets

ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ ಅಂ ಅಃ

ಕ ಖ ಗ ಘ ಙ

ಚ ಛ ಜ ಝ ಞ

ಟ ಠ ಡ ಢ ಣ

ತ ಥ ದ ಧ ನ

ಪ ಫ ಬ ಭ ಮ

ಯ ರ ಲ ವ ಶ ಷ ಸ ಹ ಳ

EXERCISES

ಅಭ್ಯಾಸ 1

1.1 ಸ್ವರಾಕ್ಷರಗಳ ಸಂಕುಚಿತಗಳು

ಅ : ಅಥವ

ಆ : “ಆ” ಅಕ್ಷರವು “ಅದು”ಎಂಬ ಪದವನ್ನು ಸೂಚಿಸುವುದರಿಂದ ಬೇರೆ ಸ್ವತಂತ್ರ ಪದ ನೀಡಿಲ್ಲ.

ಇ : ಇತಿಹಾಸ

ಈ : “ಈ” ಅಕ್ಷರವು “ಇದು”ಎಂಬ ಪದವನ್ನು ಸೂಚಿಸುವುದರಿಂದ ಬೇರೆ ಸ್ವತಂತ್ರ ಪದ ನೀಡಿಲ್ಲ.

ಉ : ಉದ್ಯೋಗ

ಊ : ಊರು

ಋ : ಋತು

ಎ : ಎಡ

ಏ : ಏಕ

ಐ : ಐಚ್ಛಿಕ

ಒ : ಒಳಗೆ

ಓ : “ಓ” ಅಕ್ಷರ “ಉದ್ಗಾರ” ಸೂಚಕವಾದ್ದರಿಂದ ಬೇರೆ ಸ್ವತಂತ್ರ ಪದ ನೀಡಿಲ್ಲ.

ಔ : ಔದ್ಯೋಗಿಕ

ಅಂ : ಅಂಗೀಕಾರ

ಹೀಗೆ ಬಳಸಬಹುದು:

ಉ : ಉದ್ಯೋಗ - ಉದ್ಯೋಗದಲ್ಲಿ, ಉದ್ಯೋಗವನ್ನು

ಋ: ಋತು – ಋತುಮಾನ

ಎ: ಎಡ – ಎಡಗಡೆ

ಏ: ಏಕ – ಏಕೈಕ

ಹೀಗೆ ಬಳಸಲಾಗುವುದಿಲ್ಲ:

ಊ: ಊರಿಗೆ

ಒ: ಒಳಗಿನಿಂದ

ಅಂ: ಅಂಗೀಕರಿಸು

1.2 ವರ್ಗೀಯ ವ್ಯಂಜನಗಳ ಸಂಕುಚಿತಗಳು

ಕ : ಕೆಳಗೆ

ಖ : ಖರ್ಚು

ಗ : ಗಣಿತ

ಘ : ಘಟಕ
ಙ : ಙ ಅನುನಾಸಿಕದಿಂದ ಯಾವ ಪದಗಳಿಲ್ಲ.
ಹೀಗೆ ಬಳಸಲಾಗುವುದಿಲ್ಲ:
ಕ : ಕೆಳಗಡೆ
ಖ : ಖರ್ಚಾಯಿತು

ಚ : ಚಟುವಟಿಕೆ
ಛ : ಛಾಯ
ಜ : ಜನಗಣತಿ
ಝ : ಝಳ
ಞ : ಞ ಅನುನಾಸಿಕದಿಂದ ಯಾವ ಪದಗಳಿಲ್ಲ.
ಹೀಗೆ ಬಳಸಬಹುದು:
ಚ: ಚಟುವಟಿಕೆ - ಚಟುವಟಿಕೆಗಳು
ಛ: ಛಾಯ - ಛಾಯಾಗ್ರಾಹಕ

ಟ : ಟೀಕೆ
ಠ : ಠಾಣೆ
ಡ : ಡೊಂಕು
ಢ : ಢಾಲು
ಣ : ಣ ಅನುನಾಸಿಕದಿಂದ ಯಾವ ಪದಗಳಿಲ್ಲ.
ಹೀಗೆ ಬಳಸಲಾಗುವುದಿಲ್ಲ:
ಡ : ಡೊಂಕಾದ

ತ : ತಾಂತ್ರಿಕ
ಥ : ಥಾಲಿ
ದ : ದಾಖಲೆ
ಧ : ಧರ್ಮ
ನ : ನಿಮಿಷ
ಹೀಗೆ ಬಳಸಬಹುದು:
ಧ : ಧರ್ಮ - ಧರ್ಮಾಧಾರಿತ
ನಿ: ನಿಮಿಷ - ನಿಮಿಷಗಳು

ಪ : ಪ್ರೋತ್ಸಾಹ
ಫ : ಫಲಿತಾಂಶ
ಬ : ಬೇರೆ
ಭ : ಭಾರತ
ಮ : ಮತ್ತು

ಹೀಗೆ ಬಳಸಬಹುದು:
ಪ : ಪ್ರೋತ್ಸಾಹಿಸು
ಹೀಗೆ ಬಳಸಲಾಗುವುದಿಲ್ಲ:
ಬ : ಬೇರಾವ

1.3 ಅವರ್ಗೀಯ ವ್ಯಂಜನಗಳ ಸಂಕುಚಿತಗಳು

ಯ : ಯಶಸ್ಸು
ರ : ರಾಜಧಾನಿ
ಲ : ಲಿಂಗ
ವ : ವಚನ
ಶ : ಶಾಸ್ತ್ರ
ಷ : ಷರಾ
ಸ : ಸಂದರ್ಭ
ಹ : ಹಾಗೂ
ಳ : ಕನ್ನಡದಲ್ಲಿ “ಳ” ಕಾರದಿಂದ ಪ್ರಾರಂಭವಾಗುವ ಅಕ್ಷರಗಳಿಲ್ಲ.

ಅಭ್ಯಾಸ 2

ಡಾಟ್ 2 ರ ಜೊತೆಗಿನ ಸಂಕುಚಿತಗಳು

ಡಾಟ್ 2ರ ಸಂಯೋಜನೆಯೊಂದಿಗಿರುವ ಸಂಕುಚಿತ ಪದವನ್ನು ಕನ್ನಡ ವರ್ಣಮಾಲೆಯ ಹ್ರಸ್ವ ಮತ್ತು ಅಲ್ಪಪ್ರಾಣ ಅಕ್ಷರಗಳ ಪದಗಳು ಹಾಗೂ ಅವರ್ಗೀಯ ವ್ಯಂಜನಾಕ್ಷರ ಪದಗಳೊಂದಿಗೆ ಮಾಡಲಾಗಿದೆ. ಬ್ರೈಲ್ ಚುಕ್ಕಿ 2 ಮತ್ತು ಅಕ್ಷರದ ಮಧ್ಯೆ ಒಂದು ಬ್ರೈಲ್ ಕೋಶದ ಜಾಗ ಬಿಡಬಾರದು.

ಅವರ್ಗೀಯ ವ್ಯಂಜನಗಳಿಗೆ (ಯ ಯಿಂದ ರ ವರೆಗೆ) ಏಕಾಕ್ಷರ ಸಂಕುಚಿತಗಳನ್ನು, ಡಾಟ್ 2 ಮತ್ತು ಡಾಟ್ಸ್ 2-3ರ ಸಂಯೋಜನೆಗಳಲ್ಲಿ ಪದಗಳ ಸಂಕುಚಿತಗಳನ್ನು ನೀಡಲಾಗಿದೆ. ಕಾರಣ ಅವರ್ಗೀಯ ವ್ಯಂಜನಗಳ ಅಕ್ಷರಗಳಿಗೆ ಹ್ರಸ್ವ, ದೀರ್ಘ, ಅಲ್ಪಪ್ರಾಣ ಮತ್ತು ಮಹಾಪ್ರಾಣಗಳ ವಿಭಜನೆಯಿಲ್ಲ.

ಅಭ್ಯಾಸ 2 ಮತ್ತು 3ರ ಪದಗಳನ್ನು ಸ್ವತಂತ್ರವಾಗಿಯೂ ಮತ್ತು ಪದಗಳ ಆದಿಯಲ್ಲಿ ಅಥವಾ ಅಂತ್ಯದಲ್ಲಿ ಬಳಸಬಹುದು. ಎರಡು ಪದಗಳ ನಡುವೆ ಸಂಧಿಯಾಗಿ, ಹೊಸದಾಗಿ ಒಂದು ಅಕ್ಷರ, ಸಂಧಿ ಪದದಲ್ಲಿ ಬಂದರೆ, ಸಂಕುಚಿತಗಳನ್ನು ಬಳಸಲಾಗುವುದಿಲ್ಲ.

2.1 ಡಾಟ್ 2 ರ ಜೊತೆಗಿನ ಹ್ರಸ್ವ ಸ್ವರಗಳ ಸಂಕುಚಿತಗಳು

1ಅ : ಅರ್ಥ
1ಇ : ಇಸವಿ
1ಉ : ಉಧ್ಘಾಟನ
1ಋ : ಋಜು
1ಎ : ಎತ್ತ
1ಒ : ಒಪ್ಪ
1ಅಂ : ಅಂತ್ಯ

ಹೀಗೆ ಬಳಸಬಹುದು:

1ಅ : ಅರ್ಥ - ಅರ್ಥಗರ್ಭಿತ, ಅರ್ಥಾಲಂಕಾರ, ಅರ್ಥಶಾಸ್ತ್ರ (ಇಲ್ಲಿ ಅರ್ಥ ಮತ್ತು ಶಾಸ್ತ್ರ, ಎರಡೂ ಪದಗಳಿಗೆ ಸಂಕುಚಿತ ಬಳಸಬಹುದು)

1ಇ : ಇಸವಿ

1ಉ : ಉಧ್ಘಾಟನ - ಉಧ್ಘಾಟನೆ, ಉಧ್ಘಾಟನಾ

1ಋ : ಋಜುವಾತು

1ಎ : ಎತ್ತ - ಎತ್ತರ, ಎತ್ತು, ಎತ್ತಾಡಿಸು, ಎತ್ತಿಡು

1ಒ : ಒಪ್ಪ - ಒಪ್ಪಂದ, ಒಪ್ಪಿಗೆ, ಒಪ್ಪು

1ಅಂ : ಅಂತ್ಯ - ಅಂತ್ಯೋದಯ

2.2 ಡಾಟ್ 2 ರ ಜೊತೆಗಿನ ಅಲ್ಪಪ್ರಾಣದ ವರ್ಗೀಯ ವ್ಯಂಜನ ಸಂಕುಚಿತಗಳು

1ಕ : ಕರ್ನಾಟಕ

1ಗ : ಗೃಹ

ಹೀಗೆ ಬಳಸಬಹುದು:

1ಕ : ಕರ್ನಾಟಕ

1ಗ : ಗೃಹ - ಗೃಹಸ್ಥ, ಗೃಹಿಣಿ

1ಚ : ಚಿತ್ರ

1ಜ : ಜೀವ

ಹೀಗೆ ಬಳಸಬಹುದು:

1ಚ : ಚಿತ್ರ - ಚಿತ್ರಾನ್ನ, ಚಿತ್ರಿಸು, ವಿಚಿತ್ರ

1ಜ : ಜೀವ - ಜೀವಂತ, ಜೀವನ, ಜೀವಾಳ, ಸಜೀವಿ

1ಟ : ಟಿಪ್ಪಣಿ
1ಡ : ಡಂಬಾಚಾರ
ಹೀಗೆ ಬಳಸಬಹುದು:
1ಟ : ಟಿಪ್ಪಣಿ
1ಡ : ಡಂಬಾಚಾರ

1ತ : ತಂತ್ರ
1ದ : ದೀರ್ಘ
1ನ : ನಂತರ
ಹೀಗೆ ಬಳಸಬಹುದು:
1ತ : ತಂತ್ರ - ತಂತ್ರಜ್ಞಾನ, ತಂತ್ರಿ, ಸ್ವತಂತ್ರ (ಇಲ್ಲಿ "ಸ್ವ" ಮತ್ತು "ತಂತ್ರ" ಪದಗಳಿಗೆ ಸಂಕುಚಿತ ಬಳಸಬಹುದು.)
1ದ : ದೀರ್ಘ – ದೀರ್ಘಾವಧಿ, ಸುದೀರ್ಘ
1ನ : ನಂತರ - ಆನಂತರ, ತದನಂತರ

1ಪ : ಪುರ
1ಬ : ಬುದ್ಧ
1ಮ : ಮುಖ

ಹೀಗೆ ಬಳಸಬಹುದು:
1ಪ : ಪುರ - ಪುರಸ್ಕಾರ, ಪುರಾಣ, ಪುರುಷ, ಅಂತಃಪುರ
1ಬ : ಬುದ್ಧ - ಬುದ್ಧಿ, ಬುದ್ಧಿವಂತ, ಪ್ರಬುದ್ಧ ("ಪ್ರ" ಮತ್ತು "ಬುದ್ಧ" - ಎರಡೂ ಸಂಕುಚಿತಗಳನ್ನು ಬಳಸಬಹುದು. "ಪ್ರ" ಸಂಕುಚಿತಕ್ಕಾಗಿ ಅಭ್ಯಾಸ 9.1 ನೋಡಿ)
1ಮ : ಮುಖ - ಮುಖಂಡ, ಮುಖಾಂತರ, ಪ್ರಮುಖ ("ಪ್ರ" ಮತ್ತು "ಮುಖ" - ಎರಡೂ ಸಂಕುಚಿತಗಳನ್ನು ಬಳಸಬಹುದು.)

2.3 ಡಾಟ್ 2 ರ ಜೊತೆಗಿನ ಅವರ್ಗೀಯ ವ್ಯಂಜನಾಕ್ಷರ ಪದಗಳ ಸಂಕುಚಿತಗಳು.
1ಯ : ಯೋಗ
1ರ : ರಾಷ್ಟ್ರ
1ಲ : ಲೋಕ
1ವ : ವೃತ್ತ
1ಶ : ಶುದ್ಧ
1ಷ : ಷೋಡಶ

1ಸ : ಸಂಸ್ಕೃತ
1ಹ : ಹಿಮ
ಹೀಗೆ ಬಳಸಬಹುದು:
1ಯ : ಯೋಗ - ಯೋಗಕ್ಷೇಮ, ಯೋಗಿ, ಪ್ರಯೋಗ, ಪ್ರಾಯೋಗಿಕ ("ಪ್ರ" ಮತ್ತು "ಯೋಗ" - ಎರಡೂ ಸಂಕುಚಿತಗಳನ್ನು ಬಳಸಬಹುದು.)
1ರ : ರಾಷ್ಟ್ರ – ರಾಷ್ಟ್ರಗೀತೆ, ರಾಷ್ಟ್ರೀಯ, ಸೌರಾಷ್ಟ್ರ
(ರಾಷ್ಟ್ರೀಯ: ಅಭ್ಯಾಸ 11ರಲ್ಲಿ "ಅಂತರ ರಾಷ್ಟ್ರೀಯ" ಸಂಯುಕ್ತ ಪದಕ್ಕೆ "ಅಂ-ರಾ" ಎಂಬ ಸಂಕುಚಿತವನ್ನು ನೀಡಲಾಗಿದೆ. ಈ ಸಂಕುಚಿತದಲ್ಲಿ ಮಾತ್ರ ರಾಷ್ಟ್ರೀಯ ಪದಕ್ಕೆ "ರಾ" ಬಳಸಬೇಕು.
"ರಾಷ್ಟ್ರೀಯ" ಪದದ ಬಳಕೆಯಲ್ಲಿ ಸಂಕುಚಿತ 2ರ + ಈ + ಯ ಬಳಸಬೇಕು.)
1ಲ : ಲೋಕ - ಲೋಕಸಭೆ, ಲೋಕಾಯುಕ್ತ
1ವ : ವೃತ್ತ – ವೃತ್ತಾಂತ, ವೃತ್ತಿ
1ಶ : ಶುದ್ಧ, ಶುದ್ಧೋದನ
1ಷ : ಷೋಡಶ - ಷೋಡಶೋಪಚಾರ, ಷೋಡಶಿ
1ಸ : ಸಂಸ್ಕೃತ - ಸುಸಂಸ್ಕೃತ, ಸಂಸ್ಕೃತಿ
1ಹ : ಹಿಮ - ಹಿಮಾಲಯ, ಮಹಿಮೆ

ಸಂಯುಕ್ತಾಕ್ಷರ
1ಕ್ಷ : ಕ್ಷೇತ್ರ
1ಜ್ಞ : ಜ್ಞಾನ
ಹೀಗೆ ಬಳಸಬಹುದು:
1ಕ್ಷ : ಕ್ಷೇತ್ರ - ಕ್ಷೇತ್ರಪಾಲ, ಕ್ಷೇತ್ರಜ್ಞ
1ಜ್ಞ : ಜ್ಞಾನ - ಜ್ಞಾನೋದಯ, ವಿಜ್ಞಾನ

ಅಭ್ಯಾಸ 3

ಡಾಟ್ಸ್ 2-3ರ ಜೊತೆಗಿನ ಪದ ಸಂಕುಚಿತಗಳು

ಡಾಟ್ಸ್2-3ರ ಸಂಯೋಜನೆಯೊಂದಿಗಿರುವ ಸಂಕುಚಿತಗಳನ್ನು ಕನ್ನಡ ವರ್ಣಮಾಲೆಯ ದೀರ್ಘ ಮತ್ತು ಮಹಾಪ್ರಾಣದ ಅಕ್ಷರಗಳಿಂದ ಪ್ರಾರಂಭವಾಗುವ ಪದಗಳಿಂದ ಹಾಗೂ ಅವರ್ಗೀಯ ವ್ಯಂಜನ ಪದಗಳಿಂದ ರಚಿಸಲಾಗಿದೆ.

ಬ್ರೈಲ್ ಡಾಟ್ಸ್2-3 ಮತ್ತು ಅಕ್ಷರದ ಮಧ್ಯೆ ಒಂದು ಬ್ರೈಲ್ ಕೋಶದ ಜಾಗ ಬಿಡಬಾರದು.

ಅಭ್ಯಾಸ 2 ಮತ್ತು 3ರ ಪದಗಳನ್ನು ಸ್ವತಂತ್ರವಾಗಿಯೂ ಮತ್ತು ಪದಗಳ ಆದಿಯಲ್ಲಿ ಅಥವಾ ಅಂತ್ಯದಲ್ಲಿ ಬಳಸಬಹುದು. ಎರಡು ಪದಗಳ ನಡುವೆ ಸಂಧಿಯಾಗಿ, ಹೊಸದಾಗಿ ಒಂದು ಅಕ್ಷರ, ಸಂಧಿ ಪದದಲ್ಲಿ ಬಂದರೆ, ಸಂಕುಚಿತಗಳನ್ನು ಬಳಸಲಾಗುವುದಿಲ್ಲ.

3.1 ಡಾಟ್ಸ್2-3 ರ ಜೊತೆಗಿನ ದೀರ್ಘ ಸ್ವರಗಳ ಸಂಕುಚಿತಗಳು.

2ಆ : ಆರೋಗ್ಯ

2ಈ : ಈವಾಗ

2ಊ : ಊರ್ಜಿತ

2ಏ : ಏರ್ಪಾಡು

2ಐ : ಐತಿಹಾಸಿಕ

2ಓ : ಓದು

2ಔ : ಔಚಿತ್ಯ

ಹೀಗೆ ಬಳಸಬಹುದು:

2ಆ : ಆರೋಗ್ಯ – ಅನಾರೋಗ್ಯ, ಆರೋಗ್ಯವಂತ

2ಈ : ಈವಾಗ - ಈವಾಗಲೇ

2ಊ : ಊರ್ಜಿತ

2ಏ : ಏರ್ಪಾಡು

2ಐ : ಐತಿಹಾಸಿಕ

2ಓ : ಓದು - ಓದುತ್ತಾರೆ (ಇಲ್ಲಿ ಸಜಾತೀಯ ಒತ್ತಕ್ಷರ ಬಳಸಬಹುದು.)

2ಔ : ಔಚಿತ್ಯ

ಬಳಸಬಾರದು: ಏರ್ಪಾಡಾಗಿಲ್ಲ,ಓದಿದನು.

3.2 ಡಾಟ್ಸ್ 2-3 ರ ಜೊತೆಗಿನ ಮಹಾ ಪ್ರಾಣ ವರ್ಗೀಯ ವ್ಯಂಜನಾಕ್ಷರ ಪದಗಳ ಸಂಕುಚಿತಗಳು

2ಖ : ಖಾಸ

2ಘ : ಘೋಷ

2ಛ : ಛಂದಸ್ಸು

2ಝ : ಝೀಂಕಾರ

2ಠ : ಠೇವಣಿ
2ಢ : ಢಣಢಣ

2ಥ : ಥಳಥಳ
2ಧ : ಧ್ವಜ

2ಫ : ಫಸಲು
2ಭ : ಭಾಷ

ಹೀಗೆ ಬಳಸಬಹುದು:
2ಖ : ಖಾಸ - ಖಾಸಗಿ, ಖಾಸಗೀಕರಣ
2ಫ : ಫೋಷ - ಫೋಷಣೆ, ಅಫೋಷಿತ, ಫಂಟಾಫೋಷ
2ಛ : ಛಂದಸ್ಸು
2ಝ : ಝೀಂಕಾರ
2ಠ : ಠೇವಣಿ
2ಢ : ಢಣಢಣ
2ಥ : ಥಳಥಳ
ಢಣಢಣ ಮತ್ತು ಥಳಥಳ ಒಂದೇ ಪದಗಳಂತೆ ಪರಿಗಣಿಸಬೇಕು.
2ಧ : ಧ್ವಜ - ಧ್ವಜಾರೋಹಣ, ರಾಷ್ಟ್ರಧ್ವಜ (ಇಲ್ಲಿ “ರಾಷ್ಟ್ರ” ಮತ್ತು “ಧ್ವಜ” ಪದಗಳಿಗೆ ಸಂಕುಚಿತ
ಬಳಸಬಹುದು.)
2ಫ : ಫಸಲು
2ಭ : ಭಾಷ - ಭಾಷಣ, ಭಾಷಾಂತರ, ಭಾಷೆ

3.3 ಡಾಟ್ಸ್ 2-3 ರ ಜೊತೆಗಿನ ಅವರ್ಗೀಯ ವ್ಯಂಜನ ಪದಗಳ ಸಂಕುಚಿತಗಳು

2ಯ : ಯೋಜನ
2ರ : ರಾಜ್ಯ
2ಲ : ಲೇಖ
2ವ : ವಾರ್ಷಿಕ
2ಶ : ಶಿಕ್ಷಣ

2ಷ : ಷಟ್ಪದಿ
2ಸ : ಸರ್ವ
2ಹ : ಹಿಂದ
ಹೀಗೆ ಬಳಸಬಹುದು:
2ಯ : ಯೋಜನ - ಯೋಜನೆ, ಯೋಜನೆಗಳಲ್ಲಿ, ಯೋಜನೆಯಿಂದ. (ಇಲ್ಲಿ ಯೋಜನೆ ಮತ್ತು ಯಿಂದ ಪ್ರತ್ಯಯ ಸಂಕುಚಿತವನ್ನು ಬಳಸಬಹುದು. "ಯಿಂದ" ಸಂಕುಚಿತಕ್ಕಾಗಿ ಅಭ್ಯಾಸ 8.5 ನೋಡಿ)
2ರ : ರಾಜ್ಯ – ಸ್ವರಾಜ್ಯ
ಸ್ವರಾಜ್ಯ ಪದದಲ್ಲಿ, ಸ್ವ ಅಥವಾ ರಾಜ್ಯ, ಇವೆರಡರಲ್ಲಿ ಒಂದು ಪದಕ್ಕೆ ಮಾತ್ರ ಸಂಕುಚಿತ ಬಳಸಬೇಕು. ಎರಡು ಸಂಕುಚಿತಗಳು ಸೇರಿ ಮತ್ತೊಂದು ಅರ್ಥ ಕೊಡುವ ಪದವಾದರೆ, ಅಂತಹ ಸಂದರ್ಭದಲ್ಲಿ ಒಂದೇ ಸಂಕುಚಿತವನ್ನು ಬಳಸಬೇಕು.
2ಲ : ಲೇಖ - ಲೇಖಕ, ಲೇಖಕಿ
2ವ : ವಾರ್ಷಿಕ - ವಾರ್ಷಿಕೋತ್ಸವ, ಪಂಚವಾರ್ಷಿಕ
2ಶ : ಶಿಕ್ಷಣ
2ಷ : ಷಟ್ಪದಿ
2ಸ : ಸರ್ವ- ಸರ್ವಜ್ಞ, ಸರ್ವಾಧಿಕಾರ, ಸರ್ವೇಸಾಮಾನ್ಯ
2ಹ : ಹಿಂದ - ಹಿಂದು, ಹಿಂದಿ, ಹಿಂದೆ

ಭ್ಯಾಸ 4

ಸ್ವರಗಳಿಗೆ ಯಾವುದೇ ಒತ್ತಕ್ಷರವಿಲ್ಲದಿರುವುದರಿಂದ ಡಾಟ್ 4 ಮತ್ತು ಸ್ವರಗಳ ಸಂಯೋಜನೆಯೊಂದಿಗೆ ಸಂಕುಚಿತಗಳನ್ನು ನೀಡಲಾಗಿದೆ. ಸ್ವರಾಕ್ಷರಗಳಿಂದ ಪ್ರಾರಂಭವಾಗುವ ಪದಗಳಿಗೆ ಮಾತ್ರ ಡಾಟ್ 4ರ ಜೊತೆಯಲ್ಲಿ ಸಂಕುಚಿತವನ್ನು ನೀಡಲಾಗಿದೆ. ಸ್ವರಗಳ ಪೂರ್ವದಲ್ಲಿ ಮಾತ್ರ ಡಾಟ್ 4ನ್ನು ಬಳಸಬೇಕು. ಸಂಕುಚಿತದ ಪೂರ್ವದಲ್ಲಿ ಬೇರಾವ ಉಪಸರ್ಗ ಅಥವಾ ಮತ್ತೊಂದು ಪದದ ಜೋಡಣೆ ಮಾಡಬಾರದು. ಸಂಕುಚಿತದ ಅಂತ್ಯದಲ್ಲಿ ಪ್ರತ್ಯಯಗಳನ್ನು ಸೇರಿಸಬಹುದು.

ಡಾಟ್ 4ರ ಜೊತೆಗಿನ ಪದ ಸಂಕುಚಿತಗಳು:
@ಅ : ಅಭ್ಯಾಸ
@ಆ : ಆರ್ಥಿಕ
@ಇ : ಇಲಾಖೆ
@ಈ : ಈಗಲೇ
@ಉ : ಉಪಾಧ್ಯಾಯ
@ಊ : ಊರ್ಧ್ವ

@ಋ : ಋಣೆ
@ಎ : ಎಷ್ಟು
@ಏ : ಏಳಿಗೆ
@ಐ : ಐಕ್ಯ
@ಒ : ಒಟ್ಟು
@ಓ : ಓರ್ವ
@ಔ : ಔತಣ
@ಅಂ : ಅಂತರಿಕ್ಷ

ಅಭ್ಯಾಸ 5

ಡಾಟ್ಸ್ 2-3-5 ಜೊತೆಗಿನ ಪದ ಸಂಕುಚಿತ**ಗಳು**

ಡಾಟ್ಸ್2-3-5 ಜೊತೆಗಿರುವ ಕನ್ನಡ ಅಕ್ಷರಗಳು ವಾರಗಳನ್ನು ಸೂಚಿಸುತ್ತವೆ. ಡಾಟ್ಸ್2-3-5 ಅಕ್ಷರದ ಪೂರ್ವದಲ್ಲಿ ಬಂದಾಗ ಮಾತ್ರ ಆಯಾ ವಾರಗಳನ್ನು ಸೂಚಿಸುತ್ತದೆ. ಡಾಟ್ಸ್2-3-5 ಮತ್ತು ಅಕ್ಷರದ ಮಧ್ಯೆ ಒಂದು ಬ್ರೈಲ್ ಕೋಶದ ಜಾಗ ಬಿಡಬಾರದು.

6ಭಾ : ಭಾನುವಾರ

6ಸೋ : ಸೋಮವಾರ

6ಮಂ : ಮಂಗಳವಾರ

6ಬು : ಬುಧವಾರ

6ಗು : ಗುರುವಾರ

6ಶು : ಶುಕ್ರವಾರ

6ಶ : ಶನಿವಾರ

ಅಭ್ಯಾಸ 6

ಡಾಟ್ 5 ರ ಜೊತೆಗಿನ ಪದ ಸಂಕುಚಿತ**ಗಳು**

ಡಾಟ್ 5 ರ ಜೊತೆಗಿರುವ ಕನ್ನಡ ಅಕ್ಷರಗಳು ತಿಂಗಳುಗಳನ್ನು ಸೂಚಿಸುತ್ತವೆ. ಡಾಟ್ 5 ಅಕ್ಷರದ ಪೂರ್ವದಲ್ಲಿ ಬಂದಾಗ ಮಾತ್ರ ಆಯಾ ತಿಂಗಳನ್ನು ಸೂಚಿಸುತ್ತದೆ. ಬ್ರೈಲ್ ಸೂಚಕ ಮತ್ತು ಅಕ್ಷರದ ಮಧ್ಯೆ ಒಂದು ಬ್ರೈಲ್ ಕೋಶದ ಜಾಗ ಬಿಡಬಾರದು.

"ಜ : ಜನವರಿ

"ಫೆ : ಫೆಬ್ರವರಿ

"ಮಾ : ಮಾರ್ಚ್

"ಏ : ಏಪ್ರಿಲ್

"ಮ : ಮೇ

"ಜೂ : ಜೂನ್

"ಜು : ಜುಲೈ

"ಆ : ಆಗಸ್ಟ್

"ಸೆ : ಸೆಪ್ಟೆಂಬರ್

"ಅ : ಅಕ್ಟೋಬರ್

"ನ : ನವೆಂಬರ್

"ಡಿ : ಡಿಸೆಂಬರ್

ಅಭ್ಯಾಸ 7

ಡಾಟ್ಸ್1-3-5-6 ಜೊತೆಗಿನ ಪದ ಸಂಕುಚಿತ**ಗಳು**

ಡಾಟ್ಸ್ 1-3-5-6 ಸಂಯೋಗದಲ್ಲಿ ಅಷ್ಟ ದಿಕ್ಕುಗಳನ್ನು ನೀಡಲಾಗಿದೆ. ಡಾಟ್ಸ್1-3-5-6 ಅಕ್ಷರದ ಪೂರ್ವದಲ್ಲಿಬಂದಾಗ ಮಾತ್ರ ಆಯಾ ದಿಕ್ಕುಗಳನ್ನು ಸೂಚಿಸುತ್ತದೆ.
ಡಾಟ್ಸ್1-3-5-6 ಮತ್ತು ಅಕ್ಷರದ ಮಧ್ಯೆ ಒಂದು ಬ್ರೈಲ್ ಕೋಶದಜಾಗ ಬಿಡಬಾರದು.

zಉ : ಉತ್ತರ
zದ : ದಕ್ಷಿಣ
zಪೂ : ಪೂರ್ವ
zಪ : ಪಶ್ಚಿಮ
zಆ : ಆಗ್ನೇಯ
zನೈ : ನೈಋತ್ಯ
zಈ : ಈಶಾನ್ಯ
zವಾ : ವಾಯುವ್ಯ

ಅಭ್ಯಾಸ 8

ಪ್ರತ್ಯಯಗಳ ಸಂಕುಚಿತಗಳು

ಪ್ರತ್ಯಯ ಎಂದರೆ ಒಂದು ಪದದ ಕೊನೆಗೆ ಸೇರುವ ಕೆಲವು ಅಕ್ಷರಗಳ ಗುಂಪುಗಳು. ಪ್ರತ್ಯಯಗಳು ಪದದ ಕೊನೆಗೆ ಸೇರಿದಾಗ ಅದರ ಅರ್ಥವನ್ನು ಮಾರ್ಪಡಿಸುವುವು. ಪ್ರತ್ಯಯಗಳು ಒಂದು ಪದದ ಭಾಗಗಳು ಹೊರತು ಸ್ವತಂತ್ರ ಪದಗಳಲ್ಲ. ಬ್ರೈಲ್ ಬರಹದಲ್ಲಿ ಉಪಯುಕ್ತವಾಗಲು, ಒಂದು ಪದದ ಕಡೆಯ ಅಕ್ಷರಕ್ಕೆ ಪ್ರತ್ಯಯವು ಸೇರಿದಾಗ ಬದಲಾದ ಅಕ್ಷರಗಳ ಸಮೂಹಕ್ಕೆ ಬ್ರೈಲ್ ಸಂಕುಚಿತವನ್ನು ನೀಡಲಾಗಿದೆ. ಪ್ರತ್ಯಯಗಳ ಸಂಕುಚಿತಗಳನ್ನು ಡಾಟ್ಸ್ 2-5; ಡಾಟ್ಸ್ 2-5-6;ಡಾಟ್ಸ್ 3-6; ಡಾಟ್ಸ್ 1-3-5-6; ಡಾಟ್ಸ್ 1-2-3-5-6 ಮತ್ತು ಡಾಟ್ಸ್ 1-2-4-5-6ಸಂಯೋಜನೆಗಳಲ್ಲಿ ನೀಡಲಾಗಿದೆ. ಪ್ರತ್ಯಯಗಳಲ್ಲಿ ರೂಪಭೇದವಾದರೆ ಅಂತಹ ಸಂದರ್ಭದಲ್ಲಿ ಸಂಕುಚಿತಗಳನ್ನುಉಪಯೋಗಿಸಲಾಗುವುದಿಲ್ಲ. ಅಂತಹ ಪದವನ್ನು ಸಂಪೂರ್ಣವಾಗಿ ಬರೆಯಬೇಕು.

ಬ್ರೈಲ್ ಸೂಚಕ ಮತ್ತು ಅಕ್ಷರದ ಮಧ್ಯೆ ಒಂದು ಬ್ರೈಲ್ ಕೋಶದ ಜಾಗ ಬಿಡಬಾರದು.

8.1 ಡಾಟ್ಸ್ 2-5 ಜೊತೆಗಿನ ಪ್ರತ್ಯಯ ಸಂಕುಚಿತಗಳು

ಡಾಟ್ಸ್2-5 ಜೊತೆಗೆ “ಬಹುದು”ಪ್ರತ್ಯಯದ ಮೊದಲನೇ ಅಕ್ಷರ ಸೇರಿದಾಗ ಆ ಪ್ರತ್ಯಯ ಸಂಕುಚಿತವಾಗುತ್ತದೆ.

2-5ಬ : ಬಹುದು

ಉದಾಹರಣೆ:

ಆಗ3ಬ = ಆಗಬಹುದು

ಇದೇ ರೀತಿಯಲ್ಲಿ, ಇರಬಹುದು, ಹೋಗಬಹುದು, ಹೇಳಬಹುದು, ಮಾಡಬಹುದು, ನೋಡಬಹುದು.

8.2 ಡಾಟ್ಸ್ 2-5-6 ಜೊತೆಗಿನ ಪ್ರತ್ಯಯ ಸಂಕುಚಿತಗಳು

ಡಾಟ್ಸ್ 2-5-6 ಜೊತೆಗೆ ಯಾವ ಪ್ರತ್ಯಯದ ಮೊದಲನೇ ಅಕ್ಷರ ಸೇರುವುದೋ ಆ ಪ್ರತ್ಯಯಾಕ್ಷರದ ಸಂಕುಚಿತವಾಗುತ್ತದೆ.

4ಕ : ಕಾಗಿ

4ಗ : ಗಾಗಿ

4ದ : ದಾಗಿ

4ನ : ನಾಗಿ

4ಯ : ಯಾಗಿ

4ರ : ರಾಗಿ

4ಲ : ಲಾಗಿ

4ವ : ವಾಗಿ

4ಳ : ಳಾಗಿ

ಉದಾಹರಣೆಗಳು:

ಅವನಿ4ಗ = ಅವನಿಗಾಗಿ

ಅದೇ ರೀತಿಯಲ್ಲಿ, ಅವಳಿಗಾಗಿ, ಅವರಿಗಾಗಿ, ಹೀಗಾಗಿ, ಅದಾಗಿ, ಅವನಾಗಿ, ಅವರಾಗಿ, ಬಹುವಾಗಿ, ಅವಳಾಗಿ.

ಪ್ರತ್ಯಯದ ಬಳಕೆ ಪದದ ಮಧ್ಯದಲ್ಲಿಯೂ ಆಗಿರಬಹುದು.

ಬೇಕಾಗಿದೆ, ಸಾಕಾಗಿದೆ, ಪರಿಣಾಮಕಾರಿಯಾಗಿದೆ, ಮಾಡಲಾಗಿದೆ ಪದಗಳಲ್ಲಿ, ಸಂಕುಚಿತದ ಬಳಿಕ “ದೆ” ಬರಬೇಕು.

ಉದಾಹರಣೆ: ಸಾಕಾಗಿದೆ = ಸಾ4ದೆ

ಸೂಚನೆ: “ಅದಕ್ಕಾಗಿ” ಪದದಲ್ಲಿ “ಕ” ಅಕ್ಷರಕ್ಕೆ ಒತ್ತಕ್ಷರ ಬರುವುದರಿಂದ ಸಂಕುಚಿತ ಬಳಸಲಾಗುವುದಿಲ್ಲ. ಪದವನ್ನು ಸ್ವಜಾತೀಯ ಒತ್ತಕ್ಷರ ಸೂಚಕವನ್ನು ಬಳಸಿ ಬರೆಯಬೇಕು.

8.3 ಡಾಟ್ಸ್ 3-6 ಜೊತೆಗಿನ ಪ್ರತ್ಯಯ ಸಂಕುಚಿತ **“ಗೋಸ್ಕರ”**

ಡಾಟ್ಸ್ 3-6 ಜೊತೆಗೆ “ಗೋಸ್ಕರ” ಪ್ರತ್ಯಯದ ಮೊದಲನೇ ಅಕ್ಷರ ಸೇರಿದಾಗ ಆ ಪ್ರತ್ಯಯದ ಸಂಕುಚಿತವಾಗುತ್ತದೆ.

ಉದಾಹರಣೆಗಳು:

ಅವನಿಗೋಸ್ಕರ, ಅವಳಿಗೋಸ್ಕರ, ಅವರಿಗೋಸ್ಕರ.

ಅವನಿಗೋಸ್ಕರ = ಅವನಿ-ಗ

ಸೂಚನೆ: “ಅದಕ್ಕೋಸ್ಕರ”ದಲ್ಲಿ ಒತ್ತಕ್ಷರ ಬರುವುದರಿಂದ ಡಾಟ್ಸ್ “3-6ಕ” ಬಳಸಲಾಗುವುದಿಲ್ಲ. ಪದವನ್ನು ಸಂಕುಚಿತವಿಲ್ಲದೆಯೇ ಬರೆಯಬೇಕು.

8.4 ಡಾಟ್ಸ್ 1-3-5-6 ಜೊತೆಗಿನ ಪ್ರತ್ಯಯ ಸಂಕುಚಿತಗಳು

ಡಾಟ್ಸ್1-3-5-6 ಜೊತೆಗೆ ಯಾವ ಪ್ರತ್ಯಯದ ಮೊದಲನೇ ಅಕ್ಷರ ಸೇರುವುದೋ ಆ ಪ್ರತ್ಯಯದ ಸಂಕುಚಿತವಾಗುತ್ತದೆ.

zಕ : ಕಂತೆ

zಗ : ಗಂತೆ

zತ : ತಂತೆ

zದ : ದಂತೆ

zನ : ನಂತೆ

zರ : ರಂತೆ

zವ : ವಂತೆ

zಳ : ಳಂತೆ

ಉದಾಹರಣೆಗಳು

ಬರಬೇಕಂತೆ, ಹಾಗಂತೆ, ಹೀಗಾಯಿತಂತೆ, ಹೇಳಿದಂತೆ, ಅವನಂತೆ, ಅವರಂತೆ, ಮಾಡುವಂತೆ, ಅವಳಂತೆ.

8.5 ಡಾಟ್ಸ್1-2-3-5-6 ಜೊತೆಗಿನ ಪ್ರತ್ಯಯ ಸಂಕುಚಿತಗಳು

(ದ : ದಿಂದ

(ನ : ನಿಂದ

(ಯ : ಯಿಂದ

(ರ : ರಿಂದ

(ಳ : ಳಿಂದ

ಉದಾಹರಣೆಗಳು: ಕಾರಣದಿಂದ, ಅವನಿಂದ, ಕಥೆಯಿಂದ, ಅವರಿಂದ, ಅವಳಿಂದ.

8.6 ಡಾಟ್ಸ್ 1-2-4-5-6 : “ಗಳ” ಪ್ರತ್ಯಯ ಸೂಚಕ

ಡಾಟ್ಸ್ 1-2-4-5-6 “ಗಳ” ಪ್ರತ್ಯಯವನ್ನು ಸೂಚಿಸುತ್ತದೆ. “ಗಳ” ಪ್ರತ್ಯಯ ಸೂಚಕವನ್ನು ಪದದ ಮಧ್ಯೆ ಅಥವಾ ಅಂತ್ಯದಲ್ಲಿ ಬಂದರೆ ಬಳಸಬೇಕು. ಬ್ರೈಲ್ ಚುಕ್ಕೆ 1-2-4-5-6 ಮತ್ತು ವ್ಯಂಜನಾಕ್ಷರದ ಮಧ್ಯೆ ಒಂದು ಬ್ರೈಲ್ ಕೋಶದ ಜಾಗ ಬಿಡಬಾರದು.

ಉದಾಹರಣೆ: ಮರಗಳ = ಮರ]

ಅದೇ ರೀತಿಯಲ್ಲಿ, ಇವು]ನ್ನು.

ಸೂಚನೆ: ಅವುಗಳಿಂದ, ಅವುಗಳಿಗೆ ಪದಗಳಲ್ಲಿ "ಗಳ" ಪ್ರತ್ಯಯ ಬಳಸಬಾರದು.

ಅಭ್ಯಾಸ 9

9.1 ಡಾಟ್ಸ್ 4-5-6 : "ಪ್ರ" ಸಂಕುಚಿತ **ಸೂಚಕ**

ಡಾಟ್ಸ್4-5-6ನ್ನು, "ಪ್ರ" ಸಂಕುಚಿತದಂತೆ ಬಳಸಬಹುದು. ಡಾಟ್ಸ್4-5-6 ಕನ್ನಡ ವರ್ಣಮಾಲೆಯ "ಳ" ಅಕ್ಷರವಾದರೂ, ಕನ್ನಡದಲ್ಲಿ "ಳ" ಕಾರದಿಂದ ಪ್ರಾರಂಭವಾಗುವ ಪದಗಳಿಲ್ಲ. "ಪ್ರ" ಬ್ರೈಲ್ ಸೂಚಕ ಡಾಟ್ಸ್ 4-5-6ನ್ನು ಪದದ ಆದಿಯಲ್ಲಿ ಮಾತ್ರ ಬಳಸಬೇಕು. ಮಧ್ಯೆ ಅಥವಾ ಅಂತ್ಯದಲ್ಲಿ ಬಂದರೆ ವಿಜಾತೀಯ ಒತ್ತಕ್ಷರ ಸೂಚಕ ಡಾಟ್ 4 ಅನ್ನು ಬಳಸಬೇಕು.

ಪ್ರಕಾರ = _ಕಾರ

ಉದಾಹರಣೆಗಳು: ಪ್ರಥಮ, ಪ್ರಯೋಗ, ಪ್ರಾಥಮಿಕ ಇತ್ಯಾದಿಗಳಲ್ಲಿ.

ಸೂಚನೆ: ವಿಪ್ರ, ಅಪ್ರಯೋಜಕ ಮುಂತಾದ ಪದಗಳಲ್ಲಿ ವಿಜಾತೀಯ ಒತ್ತಕ್ಷರ ಸೂಚಕವನ್ನು ಬಳಸಬೇಕು.

9.2 ಡಾಟ್ 5: " ಷ್ಟ" ಸಂಕುಚಿತ **ಸೂಚಕ**

"ಷ್ಟ" ಸಂಯುಕ್ತಾಕ್ಷರ ಕನ್ನಡ ಬರವಣಿಗೆಯಲ್ಲಿ ಯಥೇಚ್ಛವಾಗಿ ಬಳಕೆಯಾಗುತ್ತದೆ. ಹಾಗಾಗಿ "ಷ್ಟ"

ಸಂಯುಕ್ತಾಕ್ಷರಕ್ಕೆ ಪ್ರತ್ಯೇಕ ಬ್ರೈಲ್ ಸೂಚಕ ಡಾಟ್ 5 ಅನ್ನು ನೀಡಲಾಗಿದೆ.

"ಷ್ಟ" ಸಂಕುಚಿತಾಕ್ಷರ ಸೂಚಕ ಡಾಟ್ 5 ಅನ್ನು, ಒಂದು ಪದದ ಮಧ್ಯದಲ್ಲಿ ಅಥವಾ ಅಂತ್ಯದಲ್ಲಿ

ಉಪಯೋಗಿಸಬಹುದು.

ಉದಾಹರಣೆಗಳು:

ಕಷ್ಟ = ಕ"

ಇಷ್ಟ = ಇ"

ಇಷ್ಟು = ಇ"ಉ

ಅಷ್ಟೇ = ಅ"ಏ

ಮತ್ತಷ್ಟು = ಮ'ತ"ಉ

ನಷ್ಟವಾಯಿತು = ನ"ವಾಯಿತು

"ರಾಷ್ಟ್ರ" ಪದ ಬಳಕೆಯಲ್ಲಿ ಡಾಟ್ 2ರ ಸಂಕುಚಿತವನ್ನು ಬಳಸಬೇಕು.

ಬ್ರೈಲ್ ಕೋಶಗಳ ಬಳಕೆ ಕಡಿಮೆಯಾಗುತ್ತದೆ.

9.3 ಡಾಟ್ಸ್ 3-4-6: "ಸ್ವ" ಸಂಕುಚಿತ **ಸೂಚಕ**

"ಸ್ವ" ಸಂಯುಕ್ತಾಕ್ಷರ ಕನ್ನಡ ಬರವಣಿಗೆಯಲ್ಲಿ ಯಥೇಚ್ಛವಾಗಿ ಬಳಕೆಯಾಗುತ್ತದೆ.

ಹಾಗಾಗಿ "ಸ್ವ" ಸಂಯುಕ್ತಾಕ್ಷರಕ್ಕೆ ಪ್ರತ್ಯೇಕ ಬ್ರೈಲ್ ಸೂಚಕ ಡಾಟ್ 3-4-6 ನೀಡಲಾಗಿದೆ.

“ಸ್ವ” ಸಂಕುಚಿತಾಕ್ಷರ ಸೂಚಕ ಡಾಟ್ 3-4-6, ಪದದ ಆದಿಯಲ್ಲಿ ಅಥವಾ ಅಂತ್ಯದಲ್ಲಿ ಉಪಯೋಗಿಸಬಹುದು.
ಉದಾಹರಣೆಗೆ:
ಸ್ವದೇಶ - +ದೇಶ
ಸ್ವಾಗತ - +ಆಗತ
ನಿಸ್ವಾರ್ಥ - ನಿ+ಆರ್ಥ
ಹಾಗೆಯೇ, ಸ್ವೇಚ್ಛೆ, ಸ್ವೀಕಾರ, ಸರ್ವಸ್ವ.

ಅಭ್ಯಾಸ 10

ಸಜಾತೀಯ ಒತ್ತಕ್ಷರ ಸೂಚಕ

ಸಜಾತೀಯ ಒತ್ತಕ್ಷರಗಳಿಗೆ ಪ್ರತ್ಯೇಕವಾಗಿ ಡಾಟ್ 3 ಅನ್ನು ಸೂಚಕವಾಗಿ ಬಳಸಬೇಕು. ಒಂದೇ ಅಕ್ಷರವನ್ನು ಎರಡು ಬಾರಿ ಬಳಸುವ ಅವಶ್ಯಕತೆ ಇಲ್ಲ. ಕನ್ನಡದಲ್ಲಿ ಅನೇಕ ಪದಗಳಲ್ಲಿ ಒಂದಕ್ಕಿಂತ ಹೆಚ್ಚು ಸಜಾತೀಯ ಒತ್ತಕ್ಷರಗಳು ಇರುತ್ತವೆ. ಒಟ್ಟಾರೆ ಬ್ರೈಲ್ ಬರವಣಿಗೆಯಲ್ಲಿ
ಸ್ಥಳ ಮತ್ತು ಸಮಯ ಉಳಿತಾಯವಾಗುತ್ತದೆ.
ಉದಾಹರಣೆಗಳು:
ನಿನ್ನ - ನಿ'ನ
ಕತ್ತು - ಕ'ತಉ
ಬಣ್ಣ - ಬ'ಣ
ಪುಕ್ಕ - ಪು'ಕ
ಸೂಚನೆ: ವಿಜಾತೀಯ ಒತ್ತಕ್ಷರಕ್ಕೆ ಡಾಟ್ 4 ಅನ್ನು ಸೂಚಕವಾಗಿ ಬಳಸಿ ಎರಡೂ ಅಕ್ಷರಗಳನ್ನು ಬರೆಯಬೇಕು.

ಅಭ್ಯಾಸ 11

ಸಂಯುಕ್ತ ಪದಗಳ ಸಂಕ್ಷಿಪ್ತ**ಗಳು**

ಎರಡು ಅಥವಾ ಹೆಚ್ಚಿನ ಪದಗಳು ಸೇರಿ ಆಗುವ ಒಂದು ಪದಕ್ಕೆ ಸಂಯುಕ್ತ ಪದ ಎನ್ನುತ್ತಾರೆ. ಹೆಚ್ಚು ಬಳಕೆಯಲ್ಲಿರುವ ಸಂಯುಕ್ತ ಪದಗಳಿಗೆ, ಸಂಕ್ಷಿಪ್ತವನ್ನುನೀಡಲಾಗಿದೆ. ಸಂಯುಕ್ತ ಪದದಲ್ಲಿರುವ ಎರಡು ಪದಗಳ ಮೊದಲ ಅಕ್ಷರಗಳನ್ನು ಕೂಡಿಸಿ ಒಂದು ಸಂಕ್ಷಿಪ್ತ ಪದದಂತೆ ಬಳಸಬಹುದು. ಇಲ್ಲಿ ಸಂಕ್ಷಿಪ್ತದ ಎರಡು ಅಕ್ಷರಗಳ ಮಧ್ಯೆ, ಒಂದು ಅಡ್ಡಗೆರೆ (ಹೈಫನ್), ಬ್ರೈಲ್ ಡಾಟ್ಸ್ 3-6 ನೀಡಲಾಗಿದೆ. ಹೈಫನ್ ಮತ್ತು ಅಕ್ಷರಗಳ ಮಧ್ಯೆ ಒಂದು ಬ್ರೈಲ್ ಕೋಶದ ಸ್ಥಳ ಬಿಡಬಾರದು. ಕೆಲವು ಸಂಕ್ಷಿಪ್ತಗಳಲ್ಲಿ ಪದದ ಎರಡು ಅಕ್ಷರಗಳನ್ನು ಆಯ್ಕೆಮಾಡಿದೆ. ಕಾರಣವೆಂದರೆ, ಕೆಲವು ಏಕಾಕ್ಷರಗಳು ಪದಗಳ ಸಂಕುಚಿತ ಚಿನ್ಹೆ ಆಗಿರುತ್ತವೆ. ಸಂಕ್ಷಿಪ್ತಗಳನ್ನು ಸಂಬಂಧಪಟ್ಟ ಸಂಯುಕ್ತಪದಗಳ ಬದಲಿಗೆ ಮಾತ್ರ ಬಳಸಬೇಕು. ಬೇರೆ ಸಂದರ್ಭದಲ್ಲಿ ಬಳಸಬಾರದು.

1. ಅಂತಾರಾಷ್ಟ್ರೀಯ : ಅಂ-ರಾ
2. ಅಂಗವಿಕಲ: ಅಂ-ವಿ
3. ವಿಧಾನಸೌಧ : ವಿ-ಸೌ
4. ಸುವರ್ಣ ಸೌಧ : ಸುವ-ಸೌ
5. ವಿಧಾನ ಪರಿಷತ್ : ವಿ-ಪರಿ
6. ವಿಧಾನ ಸಭೆ : ವಿ-ಸಭೆ
7. ವಸ್ತು ಸಂಗ್ರಹಾಲಯ : ವಸ-ಸಂ
8. ಮಾತೃಭೂಮಿ : ಮಾ-ಭೂ
9. ಗಣರಾಜ್ಯೋತ್ಸವ : ಗಣ-ರಾ
10. ಸ್ವಾತಂತ್ರ್ಯ ದಿನಾಚರಣೆ : ಸ್ವಾ-ದಿನಾ
11. ಮಕ್ಕಳ ದಿನಾಚರಣೆ : ಮಕ್ಕಳ-ದಿನಾ ("ಮ", ಸ್ವತಂತ್ರ ಅಕ್ಷರ ಸಂಕುಚಿತ ಚಿನ್ಹೆಯಾದ್ದರಿಂದ, "ಮಕ್ಕಳ"ಪೂರ್ಣ ಪದವನ್ನು ತೆಗೆದುಕಒಳ್ಳಲಾಗಿದೆ. ಮಕ್ಕಳ ಪದದಲ್ಲಿ ಸಜಾತೀಯ ಒತ್ತಕ್ಷರ ಬಳಸಬಹುದು.)
12. ಕನ್ನಡ ರಾಜ್ಯೋತ್ಸವ : ಕನ್ನಡ-ರಾ ("ಕ", ಏಕಾಕ್ಷರ ಸಂಕುಚಿತ ಚಿನ್ಹೆಯಾದ್ದರಿಂದ, "ಕನ್ನಡ" ಪೂರ್ಣ ಪದವನ್ನು ತೆಗೆದು ಕೊಳ್ಳಲಾಗಿದೆ. ಕನ್ನಡ ಪದದಲ್ಲಿ ಸಜಾತೀಯ ಒತ್ತಕ್ಷರ ಬಳಸಬಹುದು.)
13. ಶಬ್ದಕೋಶ : ಶಬ-ಕೋ
14. ಪದವಿ ಪೂರ್ವ : ಪದ-ಪೂ
15. ಸ್ನಾತಕೋತ್ತರ ಪದವಿ : ಸಾ-ಪದ
16. ಭೂತಕಾಲ : ಭೂ-ಕಾ
17. ಭವಿಷ್ಯತ್ ಕಾಲ : ಭವಿ-ಕಾ
18. ವರ್ತಮಾನ ಕಾಲ : ವತ-ಕಾ
19. ರಜತ ಮಹೋತ್ಸವ : ರಜ-ಮಹ
20. ಸುವರ್ಣ ಮಹೋತ್ಸವ : ಸು-ಮಹ

21. ವಜ್ರ ಮಹೋತ್ಸವ : ವಜ-ಮಹ
22. ತಾಂತ್ರಿಕ ಶಿಕ್ಷಣ : ತಾ-2ಶ (ಶಿಕ್ಷಣ ಪದಕ್ಕೆ ಡಾಟ್ಸ್ 2-3ಶ ಸಂಕುಚಿತ ಬಳಸಬೇಕು)
23. ಪ್ರಾಥಮಿಕ ಶಿಕ್ಷಣ : ಪ್ರಾ-2ಶ
24. ಮಾಧ್ಯಮಿಕ ಶಿಕ್ಷಣ : ಮಾ-2ಶ
25. ಪ್ರೌಢ ಶಾಲೆ : ಪ್ರೌ-ಶಾ
26. ಸಮಭಾಜಕ ವೃತ್ತ : ಸಭಾ-1ವ (ವೃತ್ತ ಪದಕ್ಕೆ ಡಾಟ್ 2ವ ಸಂಕುಚಿತ ಬಳಸಬೇಕು)
27. ಕರ್ಕಾಟಕ ಸಂಕ್ರಾಂತಿ ವೃತ್ತ : ಕಸಂ-1ವ
28. ಮಕರ ಸಂಕ್ರಾಂತಿ ವೃತ್ತ : ಮಸಂ-1ವ
29. ಆರ್ಕ್ಟಿಕ್ ವೃತ್ತ : ಆರ್ಕ್-1ವ
30. ಅಂಟಾರ್ಕ್ಟಿಕ್ ವೃತ್ತ: ಅಂಟಾರ್ಕ್-1ವ
31. ಋಗ್ ವೇದ : ಋ-ವೇ
32. ಸಾಮ ವೇದ : ಸಾ-ವೇ
33. ಯಜುರ್ ವೇದ : ಯಜು-ವೇ
34. ಅಥರ್ವಣ ವೇದ : ಅಥ-ವೇ

The **Manual on Kannada Braille Contractions and Abbreviations** has been developed to facilitate faster, more efficient, and standardized Braille reading and writing for Kannada-speaking persons with visual impairment. The manual introduces a systematic set of contractions and abbreviations based on Kannada grammar, Bharati Braille principles, and practical usability. Organized into eleven structured learning modules, it provides clear guidelines for the use of contractions, suffix abbreviations, compound words, and commonly used expressions. This resource aims to enhance Braille literacy and promote uniformity in Kannada Braille usage across educational and rehabilitation settings.

ಕನ್ನಡ ಬ್ರೈಲ್ ಸಂಕುಚಿತಗಳು ಮತ್ತು ಸಂಕ್ಷೇಪಗಳ ಕೈಪಿಡಿಯನ್ನು ಕನ್ನಡ ಮಾಧ್ಯಮದಲ್ಲಿ ಓದುವ ದೃಷ್ಟಿ ವಿಕಲಚೇತನರಿಗೆ ಸರಾಗವಾಗಿ ಮತ್ತು ವೇಗವಾಗಿ ಓದಲು ಹಾಗೂ ಬರೆಯಲು ಅನುಕೂಲವಾಗುವಂತೆ ರೂಪಿಸಲಾಗಿದೆ. ಈ ಬ್ರೈಲ್ ಸಂಕುಚಿತಗಳು ಮತ್ತು ಸಂಕ್ಷೇಪಗಳ ಸಹಾಯದಿಂದ ಮಕ್ಕಳು ಸಮರ್ಥವಾಗಿ ಕನ್ನಡ ಬ್ರೈಲ್ ಬಳಕೆ ಮಾಡಬಹುದು. ಕನ್ನಡ ವ್ಯಾಕರಣ ಮತ್ತು ಭಾಷಾ ಸೂತ್ರಗಳಿಗೆ ಹಾಗೂ ಭಾರತಿ ಬ್ರೈಲ್ ನಿಯಮಗಳಿಗೆ ಅನುಸಾರವಾಗಿ ಕನ್ನಡ ಬ್ರೈಲ್ ಸಂಕುಚಿತಗಳು ಮತ್ತು ಸಂಕ್ಷೇಪಗಳನ್ನು ಸಿದ್ಧಪಡಿಸಲಾಗಿದೆ. ಹನ್ನೊಂದು ಅಭ್ಯಾಸಗಳಲ್ಲಿ ಅರಿಯಲು ಸರಳವಾದ ಸಂಕುಚಿತಗಳು ಮತ್ತು ಸಂಕ್ಷೇಪಗಳನ್ನು ನೀಡಲಾಗಿದೆ. ಕನ್ನಡ ಬ್ರೈಲ್ ಸಂಕುಚಿತಗಳು ಮತ್ತು ಸಂಕ್ಷೇಪಗಳು ಕನ್ನಡ ಬ್ರೈಲ್‌ನಲ್ಲಿ ಏಕರೂಪತೆ ತರಲು ಸಹಾಯಕವಾಗಿದೆ. ಇದರಿಂದಾಗಿ ಕರ್ನಾಟಕದ ದೃಷ್ಟಿ ವಿಕಲಚೇತನ ಮಕ್ಕಳಲ್ಲಿ ಸಾಕ್ಷರತೆಯನ್ನು ಹೆಚ್ಚಿಸಲು ಅನುಕೂಲವಾಗುತ್ತದೆ.